# ನೇಸರು
ತಿಂಗಳೋಲೆ

₹ 5/-

PAGES 20

SEPTEMBER 2022 | Nesaru Tingalole | Vol. XL - 9



"ತಾಯಿ ನಮ್ಮನ್ನು ನಿನ್ನ ಮಡಿಲಲ್ಲಿ ಕಾಪಾಡು"

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065
Email : mysoreassociation.mumbai@gmail.com

# ಸ್ವಾತಂತ್ರ್ಯೋತ್ಸವ ಅಮೃತಗಳಿಗೆ



ನಮ್ಮ ಪ್ರಧಾನಿ ನರೇಂದ್ರ ಮೋದಿಯವರು ಈ ವರ್ಷ ಭಾರತ ದೇಶದ ಮನೆಮನೆಗಳಲ್ಲವೂ ರಾಷ್ಟ್ರದ ತ್ರಿವರ್ಣ ಧ್ವಜವನ್ನು. ಹಾರಿಸಿ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸೋಣ ಎಂಬ ಕರೆ ಕೊಟ್ಟಿದ್ದರು. ಅದನ್ನು ಗೌರವಿಸುತ್ತ ನಾವು ಮೈಸೂರು ಅಸೋಸಿಯೇಶನ್ನಲ್ಲೂ




ಆಗಸ್ಟ್ 15ರಂದು 76ನೆಯ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ವಿಶೇಷ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆವು. ಮೊದಲಿಗೆ ಬೆಳಗಿನ 10.30 ಕ್ಕೆ ಅಧ್ಯಕ್ಷೆ ಕಮಲಾ ಅವರು ಇತರ ಸದಸ್ಯರೊಡನೆ ತ್ರಿವರ್ಣ ಧ್ವಜ ಹಾರಿಸಿ ರಾಷ್ಟ್ರಗೀತೆ ಹಾಡಿ ಗೌರವ ಸಲ್ಲಿಸಿದರು. ಸದಸ್ಯರೆಲ್ಲ ಉಪಹಾರ ಸೇವಿಸಿದ ನಂತರ ಎರಡನೆ ಮಹಡಿಯ ಸಭಾಗೃಹದಲ್ಲಿ ಸೇರಿದರು.

11.15 ರಿಂದ 12.30ರ ವರೆಗೆ ಒಂದೂ ಕಾಲು ಗಂಟೆ ಹರೀ ಶೈಟ್ಟಿ ಮತ್ತು ತಂಡದವರ ಸುಶ್ರಾವ್ಯ ಗಾಯನ ಕಾರ್ಯಕ್ರಮ ನಡೆಯಿತು. ಕನ್ನಡದಲ್ಲಿ ದೇಶ ಭಕ್ತಿ ಗೀತೆಗಳು, ಭಾವ ಗೀತೆಗಳು, ಭಕ್ತಿ ಗೀತೆಗಳನ್ನು ಕೇಳುವ, ಆನಂದಿಸುವ ಭಾಗ್ಯ ನಮ್ಮೆಲ್ಲರದಾಗಿತ್ತು.

ಮತ್ತೆ ಮೊದಲನೆಯ ಮಹಡಿಗೆ ಬಂದೆವು. ನಮ್ಮ ಕಾರ್ಯದರ್ಶಿಗಳಾದ ಗಣಪತಿ ಶಂಕರಲಿಂಗ್ ಕಾರ್ಯಕ್ರಮ ನಿರೂಪಣೆ ಮಾಡಿದರು. ಶಶಿಕಾಂತ ಜೋಶಿಯವರು ರಸ ಪ್ರಶ್ನೆಗಳನ್ನು ಕೇಳಿ ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ನಮ್ಮ ಸುಜ್ಞಾನವನ್ನು ಪರೀಕ್ಷಿಸಿದರು. ಮಧ್ಯೆ ಮಧ್ಯೆ ಸೂರ್ಯ ನಾರಾಯಣರಾಯರು, ಲಕ್ಷ್ಮೀ ಸೀತಾರಾಮ್, ಡಾ. ಬಿ. ಆರ್. ಮಂಜುನಾಥ್, ಶಶಿಕಾಂತ್ ಜೋಶಿ, ಪದ್ಮಜಾ ಬನವಾಸಿ, ಮಂಜುನಾಥಯ್ಯ ಮೊದಲಾದವರು ಹಿಂದಿನ ಸ್ವಾತಂತ್ರ್ಯ ದಿನಗಳ ಅನುಭವಗಳನ್ನು ಹಂಚಿಕೊಳ್ಳುವುದರ ಜೊತೆಗೆ ಇಂದಿನ ಸ್ವಾತಂತ್ರ್ಯೋತ್ಸವದ ಮಹತ್ವವನ್ನು ಅರಿವು ಮಾಡಿಸಿದರು. ಶಂಕರಲಿಂಗ್‌ರವರ ಹಾಸ್ಯ ಚಟಾಕಿಗಳು ಮುದಕೊಟ್ಟವು. ರಸ ಭೋಜನದೊಡನೆ ಕಾರ್ಯಕ್ರಮ ಮುಕ್ತಾಯವಾಯ್ತು.

# ಕೈಲಾಸಂ ಸಂಸ್ಮರಣೆ ಮತ್ತು 'ಅವಳ ಕಾಗದ'



ಜುಲೈ 29 ಕೈಲಾಸಂ ಅವರು ಹುಟ್ಟಿದ ದಿನ. ಹಾಗಾಗಿ ಈ ಕಾರ್ಯಕ್ರಮ ಜುಲೈ 30ರಂದು ನಡೆಸುವ ನಿರ್ಣಯ ಮಾಡಿಯಾಗಿತ್ತು ಆದರೆ ಕಾರಣಾಂತರಗಳಿಂದ ಆಗಸ್ಟ್ 28 ರಂದು ನಡೆಯುವಂತಾಯ್ತು. ಅಸೋಸಿಯೇಶನ್ ಸಹ ಕಾರ್ಯದರ್ಶಿ ಶ್ರೀ ನಾರಾಯಣ ನವಿಲೇಕರ್ ಕಾರ್ಯಕ್ರಮದ ಆರಂಭಕ್ಕೆ ಚಾಲನೆ ನೀಡಿದರು. 'ಅಸೋಸಿಯೇಶನ್ ಅಧ್ಯಕ್ಷೆ ಕಮಲಾ "ಕನ್ನಡಕ್ಕೊಬ್ಬನೇ ಕೈ' ಬಗ್ಗೆ ತಿಳಿಸುತ್ತ ಅವರು ಇಂದಿಗೂ ಯಾಕೆ ಮತ್ತು ಹೇಗೆ ಪ್ರಸ್ತುತ ಎಂಬುದರ ಬಗ್ಗೆ ಬೆಳಕು ಬೀರಿದರು.

ಮುಂಬಯಿಯ ಖ್ಯಾತ ನಾಟಕಕಾರ ನಿರ್ದೇಶಕರಾದ ಡಾ. ಭರತ್‌ಕುಮಾರ್ ಪೊಲಿಪು ಕೈಲಾಸಂ ಅವರ ಜೀವನ ಮತ್ತು ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟರು. ಹಾಗೆಯೇ ಅವರ ಎಲ್ಲ ನಾಟಕಗಳ ಮೇಲೂ ಕ್ಷ ಕಿರಣ ಬೀರಿದರು. ಇನ್ನೊಬ್ಬ ಅತಿಥಿ ಎನ್.ಕೆ.ಇ.ಎಸ್.ನ ಅಧ್ಯಕ್ಷರಾದ ಶ್ರೀ ಪಾರ್ಥ ಸಾರಥಿಯವರು ಅವರ ತಂದೆ ಶ್ರೀ ಸಂಪತ್, ಕೈಲಾಸಂ ಅವರ ನಾಟಕಗಳಲ್ಲಿ ಪಾತ್ರ ವಹಿಸುತ್ತಿದ್ದುದ್ದನ್ನು ಅವರ ಅನುಭವವನ್ನು ಹಂಚಿಕೊಂಡರು. ಕೈಲಾಸಂ ಒಬ್ಬ ಪ್ರತಿಭಾವಂತ ಆದರೆ ವಿಕ್ಷಿಪ್ತ ವ್ಯಕ್ತಿತ್ವವುಳ್ಳವರಾಗಿದ್ದರು. ಅವರು ಎಂದೂ ತಾವೇ ನಾಟಕವನ್ನು ಬರೆದವರಲ್ಲ, ಪಾತ್ರಗಳನ್ನು ಹಂಚಿ ಸಂಭಾಷಣೆಗಳನ್ನು ಹೇಳುತ್ತ ಹೋಗುತ್ತಿದ್ದರು. ಗೆಳೆಯರು ಅದನ್ನು ಬರೆದುಕೊಂಡು ನಾಟಕ ರೂಪದಲ್ಲಿ ಪ್ರಕಟಿಸುತ್ತಿದ್ದರು. ಮೈಸೂರು ಅಸೋಸಿಯೇಶನ್ ಗಾಗಿಯೂ ನಾಟಕ ಮಾಡಿಸಿದ್ದರು. ಸಮಾಜದ ಕುಂದು ಕೊರತೆಗಳನ್ನು ಎತ್ತಿ ತೋರಿಸಿ ಅವನ್ನು ಸರಿಪಡಿಸುವತ್ತ ಅವರ ಲಕ್ಷ್ಯವಿರುತಿತ್ತು. ಬೆಂಗಳೂರು ಮೈಸೂರು ಕಡೆಯ ಆಡು ಭಾಷೆಯ ಶೈಲಿಯಲ್ಲಿ ಅವರ ಸಂಭಾಷಣೆ ಇರುತಿತ್ತು. ಅವರ ನಾಟಕಗಳಲ್ಲಿ ಹೆಚ್ಚಾಗಿ ಹೆಣ್ಣಿನ ಜೀವನದ ನೋವು ಸಂಕಟಗಳೇ ಪ್ರಮುಖ ವಿಷಯವಾಗಿರುತ್ತಿದ್ದವು. ಇಂದಿನ ನಾಟಕ 'ಅವಳ ಕಾಗದ' ಹೀಗೇ ಒಬ್ಬ ಹೆಣ್ಣಿನ ಒಳತುಮುಲಗಳನ್ನು ತೆರೆದಿಡುತ್ತ ಅವಳ ಸ್ವತಂತ್ರ ವಿಚಾರಗಳನ್ನು ಪರಿಚಯಿಸುತ್ತದೆ. ರವೀಂದ್ರನಾಥ ಠಾಕೂರರ ಈ ಸಣ್ಣ ಕಥೆಯ ನಾಟಕ ರೂಪಾಂತರ ಮಾಡಿದವರು ಸುಧಾ ಅಡುಕುಳ, ನಿರ್ದೇಶನ ಶ್ರೀಪಾದ ಭಟ್ಟರದು, ಏಕಪಾತ್ರಾಭಿನಯ ಅಹಲ್ಯಾ ಬಲ್ಲಾಳರದು. ಕೇವಲ 50 ನಿಮಿಷದ ನಾಟಕ ಅಹಲ್ಯಾ ಅವರ ಅಮೋಘ ಅಭಿನಯದಿಂದ ದೀರ್ಘಕಾಲ ಎಲ್ಲರ ಮನದಲ್ಲಿ ಉಳಿಯುವಂತಾಯ್ತು. ಎಲ್ಲರೂ ಎದ್ದು ನಿಂತು ಸುದೀರ್ಘವಾಗಿ ಚಪ್ಪಾಳೆ ತಟ್ಟಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು ಕಮಲಾ ಅವರು ಶಾಲು ಹೊದಿಸಿ ಸನ್ಮಾನಿಸಿದರು. ಕಾರ್ಯದರ್ಶಿಗಳಾದ ಡಾ. ಗಣಪತಿ ಶಂಕರಲಿಂಗ್ ಅವರು ವಂದನಾರ್ಪಣೆ ಮಾಡಿದರು.

ಸಂಪಾದಕೀಯ

ನೇಸರು ತಿಂಗಳೋಲೆ

ಸಂಪುಟ 40 ಸೆಪ್ಟೆಂಬರ್–2022 ಸಂಚಿಕೆ 9

# ಕಾಲಾಯ ತಸ್ಮೈ ನಮಃ



✍ **ಡಾ. ಜ್ಯೋತಿ ಸತೀಶ್**

ಕಾಲ ಎಷ್ಟೊಂದು ಬದಲಾಗಿದೆ ಅಲ್ಲವೇ ಬಂಧುಗಳೇ? ಈ ಬದಲಾವಣೆಯೊಂದಿಗೆ ನಾವೆಲ್ಲೋ ನಮ್ಮತನವನ್ನೂ ಕಳೆದುಕೊಳ್ಳುತ್ತಿದ್ದೇವೆಯೇ ಅನ್ನುವ ಭಾಸವಾಗುತ್ತಿದೆ. ಬದುಕಿನಲ್ಲಿ ಸಮಸ್ಯೆಗಳು ಎದುರಾದಾಗ 'ಕಾಲಾಯ ತಸ್ಮೈ ನಮಃ' ಅಂತ ಹೇಳುತ್ತಾ ನಮ್ಮನ್ನೇ ನಾವು ಸಮಾಧಾನಿಸಿಕೊಳ್ಳುತ್ತೇವೆ. ಎಲ್ಲ ನೋವುಗಳಿಗೆ ರಾಮಬಾಣ 'ಕಾಲ'. ಕಾಲ ಎಲ್ಲವನ್ನೂ ಮರೆಸುತ್ತದೆ. ಕಾಲ ಸರಿದಂತೆ ನೋವು ನಮ್ಮ ಮನಃ ಪಟಲದಿಂದ ಮರೆಯಾಗಿರಬಹುದು. ಆದರೆ ನಮ್ಮ ಮನಸ್ಸಿನ ಮೂಲೆಯಲ್ಲಿ ಎಲ್ಲೋ ಮನೆ ಮಾಡಿರುತ್ತದೆ. ಆ ನೋವಿಗೆ ಸಂಬಂಧಿಸಿದ ಘಟನೆಗಳು ಕಣ್ಣೆದುರಿಗೆ ಬಂದಾಗ, ಮತ್ತೆ ಆ ನೋವು ದುತ್ತೆಂದು ನಮ್ಮ ಮುಂದೆ ಹರಿದಾಡಲಾರಂಭಿಸುತ್ತದೆ. ಇನ್ನು ಕಾಲದ ಬದಲಾವಣೆಯ ಜೊತೆಗೆ ನಾವೂ ಕೂಡ ಬದಲಾಗುತ್ತಿದ್ದೇವೆ. ಹೊರಗಿನ ಜಗತ್ತಿನ ಬೂಟಾಟಿಕೆಯಲ್ಲಿ ಮೈಮರೆತಿದ್ದೇವೆ. ಕಾಲಕ್ಕೆ ತಕ್ಕಂತೆ ನಾವು ಒಗ್ಗಿಕೊಳ್ಳುತ್ತಿದ್ದೇವೆ. ಪರಿವರ್ತನೆ ಜಗದ ನಿಯಮ ನಿಜ. ಆದರೆ ಪರಿವರ್ತನೆಯಲ್ಲಿ ನಮ್ಮತನವನ್ನು ಮರೆಯಬಾರದು ಅಷ್ಟೇ. ಎಲ್ಲರೂ ಮಾಡುತ್ತಾರೆಂದು ನಾವು ಮಾಡಬಾರದು.

ನಮಗೆ ಸೌಲಭ್ಯಗಳು ಹೆಚ್ಚಿದಂತೆಲ್ಲ, ಸಮಸ್ಯೆಗಳು ಹೆಚ್ಚು ಹೆಚ್ಚು ಹುಟ್ಟಿಕೊಳ್ಳುತ್ತವೆ. ಹಿಂದೆ ನಮ್ಮ ಅಜ್ಜಿಯಂದಿರ ಕಾಲದಲ್ಲಿ, ಯಾರೂ ಯಾರ ಮೇಲೆ ಅವಲಂಬಿತವಾಗಿರಲಿಲ್ಲ. ಎಲ್ಲ ಕೆಲಸಗಳನ್ನು ಸ್ವತಃ ಮಾಡುತ್ತಿದ್ದರು. ಇವತ್ತಿನ ಹೆಚ್ಚಿನ ಮನೆಗಳಲ್ಲಿ ಕೈಗೊಂದು ಕೆಲಸದಾಳು, ಕಾಲಿಗೊಂದು ಕೆಲಸದಾಳು. ನಾವು ದೈಹಿಕವಾಗಿ ಕೆಲಸಮಾಡೋದು ಕಮ್ಮಿ ಆಗಿರೋದರಿಂದ, ನಮ್ಮಲ್ಲಿ ಕಾಯಿಲೆಗಳು ಜಾಸ್ತಿಯಾಗುತ್ತಿವೆ. ನಾವು ನಮ್ಮಗಿಂತ ಹೆಚ್ಚಾಗಿ ಮೆಷಿನ್ ಗಳ ಮೇಲೆ ಹೆಚ್ಚು ಅವಲಂಬಿತವಾಗಿದ್ದೇವೆ. ಇಂದು ಮೆಷಿನ್‌ಗಳು ಮಾಡುವ ಅರ್ಧದಷ್ಟಾದರೂ ಕೆಲಸ ನಾವು ಮಾಡಿದ್ದಿದ್ದರೆ ಸಾಕಿತ್ತು. ನಮ್ಮ ಅಜ್ಜಿಯಂದಿರು ಸಾಯುವವರೆಗೆ ಕನ್ನಡಕ ಎಲ್ಲ ಹಾಕಲೇ ಇಲ್ಲ. ಅವರ ಕಣ್ಣುಗಳೆಲ್ಲ ಅಷ್ಟೊಂದು ಶಕ್ತಿಯುತವಾಗಿತ್ತು. ಒಮ್ಮೆ ನಾವು ಸಿಂಹಾವಲೋಕನ ಮಾಡಿದಾಗ, ಆಗಿನ ಕಾಲದಲ್ಲಿ ಎಲ್ಲಿ ಆಸ್ಪತ್ರೆ, ಡಾಕ್ಟರ್ ಗಳು ಇರ್ತಾ ಇದ್ರು? ಎಲ್ಲರೂ ಮನೆಯಮದ್ದು ಅಥವಾ ನಾಟಿ ವೈದ್ಯರ ಬಳಿಯೇ ಹೋಗುತ್ತಿದ್ದರು. ಈಗಿನ ಹಾಗೆ ಗಲ್ಲಿ ಗಲ್ಲಿಗೊಂದು ಕ್ಲಿನಿಕ್‌ಗಳು ಇರ್ತಾ ಇರಲಿಲ್ಲ. ಇಂದು ಎಲ್ಲ ಕ್ಷೇತ್ರಗಳು ಲಾಭ ನಷ್ಟದ ಉದ್ದೇಶದಿಂದಾಗಿ ವ್ಯವಹಾರದ ಉದ್ಯಮಗಳಾಗಿ ಬಿಟ್ಟಿವೆ. ಅದು ಶಿಕ್ಷಣ ಕ್ಷೇತ್ರವಾಗಿರಬಹುದು, ಆರೋಗ್ಯದ ಕ್ಷೇತ್ರವಾಗಿರಬಹುದು. ಇಂದು ಮನುಷ್ಯತ್ವಕ್ಕೆ, ಮಾನವೀಯತೆಗೆ ಬೆಲೆ ಇಲ್ಲ. ಎಲ್ಲವನ್ನೂ ಲಾಭ ನಷ್ಟದ ಮೂಲಕ ತೂಕ ಮಾಡುವ ಕಾಲ.

ನಮ್ಮಲ್ಲಿ ಒಂದು ಗಾದೆ ಇದೆ. 'ಹಿತ್ತಲ ಗಿಡ ಮದ್ದಲ್ಲ' ಅಂತ ಕಡೆಗಣಿಸುತ್ತೇವೆ. ನಮ್ಮ ಮನೆಯ ಹಿತ್ತಲಿನಲ್ಲಿ ಓಷಧೀಯ ಗುಣಗಳಿರುವ ಗಿಡಗಳಿದ್ದರೂ, ನಮ್ಮ ಗಮನ ಅವುಗಳ ಮೇಲಿರುವುದಿಲ್ಲ. ನಾವು ಇಂಗ್ಲೀಷ್ ಔಷಧಿಗಳ ಮೇಲೆ ಹೆಚ್ಚು ಭರವಸೆ ಇಟ್ಟಿರೋದರಿಂದ, ಅವುಗಳ ಪ್ರಾಮುಖ್ಯತೆ ನಮಗೆ ಗೊತ್ತಾಗಲೇ ಇಲ್ಲ. 'ಅಂಗೈಯಲ್ಲಿ ಬೆಣ್ಣೆ ಹಿಡ್ಕೊಂಡು, ಬೆಣ್ಣೆಗಾಗಿ ಊರೆಲ್ಲಾ ಸುತ್ತೋದು' ಗಾದೆಯ ಹಾಗೆ ಆಯಿತು ನಮ್ಮ ಬದುಕು. ನಮ್ಮ ಕಣ್ಣುಗಳಿಗೆ ದೂರದ ಬೆಟ್ಟ ಯಾವಾಗಲೂ ನುಣ್ಣಗೆಯೆ ಕಾಣುವುದು. ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ ಊರ ಬಾಗಿಲು ಹಾಕಿದರಂತೆ ಹಾಗಾಗಿದೆ ನಮ್ಮ ಪರಿಸ್ಥಿತಿ. ನಮ್ಮ ಮೂರ್ಖತನದಿಂದ ನಮ್ಮ ಅರ್ಧದಷ್ಟು ಪರಿಸರ ಈಗಾಗಲೇ ನಾಶವಾಗಿದೆ. ಈಗೀಗ ನಾವು ಸ್ವಲ್ಪ ಮಟ್ಟಿಗೆ ಎಚ್ಚರಗೊಂಡಿದ್ದೇವೆ. ಮೊದಲು ಬೇಸಾಯ ಮಾಡುವಾಗ ನಮ್ಮ ಹಿರಿಯರು ಗೊಬ್ಬರವನ್ನು ತಮ್ಮ ತಮ್ಮ ಗದ್ದೆಗಳಿಗೆ ಹಾಕಿ, ಅದರಿಂದ ಫಸಲನ್ನು ತೆಗೆಯುತ್ತಿದ್ದರು.

ಪುಟ 14 ರಲ್ಲಿ ಮುಂದುವರೆಯುವುದು....

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.

– ಸಂ.

The views expressed by the contributors in this journal are theirs and not of the Association and the Association is not in anyway responsible for the same.

- Ed.

****

ಸಂಪರ್ಕ ವಿಳಾಸ:

ನೇಸರು

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ
ಮುಂಬಯಿ – 400 019.
✆ 24037065
Email:
Mysoreassociation.mumbai@gmail.com
Website:
www.mysoreassociation.in

# ಭರತ ವರ್ಷ



ಡಾ. ಮಂಜುನಾಥ್

ಬಹಳ ಹಿಂದಿನಿಂದಲೂ ಈ ನಾಡನ್ನು "ಭರತ ವರ್ಷ" ಎಂದು ಕರೆಯುತ್ತಾರೆ.
"ಜಂಬೂದ್ವೀಪೇ
ಭರತಖಂಡೇ
ಭರತ ವರ್ಷೇ"
ಎಂದೇ ಹೇಳಿ ಎಲ್ಲಾ ಪೂಜೆಯನ್ನು ಮಾಡಲಾಗುತ್ತದೆ.


ಆದರೆ ಈ "ಭರತ" ಎಂದರೆ ಯಾರು? ಎಂಬ ಪ್ರಶ್ನೆಗೆ ಉತ್ತರ ಸಿಗುವುದೇ ಕಷ್ಟವಾಗುತ್ತದೆ. ಏಕೆಂದರೆ 'ಭರತ' ಎನ್ನುವುದು ಸಾಮಾನ್ಯ ಹೆಸರಾಗಿ ಬಹಳ ಜನರಿಗೆ ನಾಮಕರಣವಾಗಿದೆ. ಮಹಾಭಾರತದಲ್ಲಿ ವ್ಯಾಸ ಮುನಿ "ನಾಭಿರಾಜ ಜಯಂತಿಯ ಮಗ, ಭರತನಿಂದ ಈ ನಾಡಿಗೆ 'ಭರತವರ್ಷ' ಎಂದು ಹೆಸರಾಯಿತು ಎನ್ನುತ್ತಾರೆ.

ಅಂದರೆ ಇವನು ನಾಭಿರಾಜ ಮತ್ತು ಜಯಂತಿಯ ಮಗ, ಈ ನಾಡಿಗೆಲ್ಲಾ ಅವನೇ ದೊರೆಯಾಗಿದ್ದ ಎಂದು. "ನಾಭಿರಾಜ" ಎಂದರೆ 'ಋಷಭದೇವ' ಇಬ್ಬರು ಗಂಡು ಮಕ್ಕಳು. ಒಬ್ಬ ಭರತ, ಇನ್ನೊಬ್ಬ ಬಾಹುಬಲಿ. ಇವರಿಬ್ಬರಿಗೂ ಋಷಭದೇವ ತನ್ನ ರಾಜ್ಯವನ್ನು ಹಂಚಿ ಕೊಡುತ್ತಾನೆ. ಆದರೆ ಭರತನಿಗೆ ಆಸೆ. ಅವನ ಬೊಕ್ಕಸದಲ್ಲಿ 'ಚಕ್ರ'ವೊಂದು ಹುಟ್ಟಿ, ಅದು ದೇಶ ದೇಶಗಳನ್ನೆಲ್ಲಾ ಸುತ್ತಲು ತೊಡಗುತ್ತದೆ. ಭರತ ಅದನ್ನು ಹಿಂಬಾಲಿಸಿ ಆ ದೇಶಗಳ ದೊರೆಗಳನ್ನೆಲ್ಲ ಸೋಲಿಸಿ, ತನ್ನ ರಾಜ್ಯವನ್ನು ಹಿಗ್ಗಲಿಸುತ್ತಾನೆ. ಅವನು ಚಕ್ರವನ್ನೇ ಅನುಸರಿಸಿ ಹೋದ್ದರಿಂದ ಅವನಿಗೆ ಚಕ್ರವರ್ತಿ ಎಂದಾಯಿತು. ಚಕ್ರ ಕಡೆಗೆ ಹೋಗಿ ಮಾಹೀಷ್ಮತಿ ನಗರದ ಬಾಗಿಲಲ್ಲೇ ನಿಂತುಕೊಂಡಿದ್ದರಿಂದ ಬಾಹುಬಲಿ ಈಚೆಗೆ ಬಂದು ತಮ್ಮಿಬ್ಬರ ಜಗಳದಲ್ಲಿ ಬೇರೆಯವರು ಸಾಯುವುದೇಕೆ? ನಾವಿಬ್ಬರೇ ಅಣ್ಣ ತಮ್ಮಂದಿರೇ ಕಾಳಗ ಮಾಡಿ ಇದನ್ನು ತೀರ್ಮಾನ ಮಾಡಬೇಕೆನ್ನುತ್ತಾನೆ. ದೃಷ್ಟಿಯುದ್ಧ, ಮಲ್ಲಯುದ್ಧ, ಗದಾಯುದ್ಧ, ಕತ್ತಿವರಸೆ ಎಲ್ಲದರಲ್ಲೂ ಭರತ ಸೋಲುತ್ತಾನೆ. ಆದರೆ ಬಾಹುಬಲಿ, ತಾನು ಅಣ್ಣನನ್ನು ಗೆದ್ದನೆಂಬ ಸೊಕ್ಕಿಗೆ ತಾನು ಸೋಲಬಾರದೆಂದು ರಾಜ್ಯವನ್ನು ಬಿಟ್ಟು ಕಾಡಿಗೆ ಹೋಗುತ್ತಾನೆ.

ರಾಮನ ತಮ್ಮ ಇನ್ನೊಬ್ಬ ಭರತ, ಶಕುಂತಲೆಯ ಮಗ ಇನ್ನೊಬ್ಬ ಭರತ, ಭರತಮುನಿ ಸಂಗೀತ ನೃತ್ಯಗಳ ಗುರು, ಜಡಭರತ ತಾನು ಹೋದೆಡೆಯೆಲ್ಲಾ ಮಳೆಯನ್ನು ಕೊಂಡು ಹೋದವನು. ಎಲ್ಲಾ ಶಾಲೆಗಳಲ್ಲೂ, ಕಾಳಿದಾಸನ ಪ್ರಭಾವದಿಂದ ಮಾಸ್ತರುಗಳು ಶಕುಂತಳ ಮಗನಿಂದಲೇ ಈ ನಾಡಿಗೆ ಭರತವರ್ಷ, ಭಾರತ ಎಂಬ ಹೆಸರು ಬಂದಿದೆ ಎಂದು ತಿಳಿಸುತ್ತಾರೆ. ಎಲ್ಲಾ ಮಕ್ಕಳಿಗೂ ಕಥೆಗಳೆಂದರೆ ಎಲ್ಲರಿಗೂ ಇಷ್ಟ. ಮಕ್ಕಳಿಗಂತೂ ಕಥೆಗಳೆಂದರೆ ಮೈಯ್ಯೆಲ್ಲಾ ಕಿವಿ. ಆದರೆ ದಿಟವಾದದ್ದು ಏನು? ಈ ಬಗ್ಗೆ ತಮ್ಮ ತಲೆಯಲ್ಲಿ ಎಣಿಕೆ ಹಾಕಿದವರೇ ಕಡಿಮೆ ಯಾರಿಗೆ ಬೇಕು ತಲೆನೋವು?

ಸಂಸ್ಕೃತ ಒಂದು ವೈಜ್ಞಾನಿಕ ಭಾಷೆ. ಅದರಲ್ಲಿ ಧಾತು ಎಂದರೆ ಮೂಲಬೇರು ಬಹಳ ಮುಖ್ಯ. ಧಾತುವಿನಿಂದಲೇ ಎಲ್ಲಾ ಪದಗಳೂ ಹುಟ್ಟುವುದು. ಈಗ ನಮಗೆ ಸಿಕ್ಕಿರುವುದು ಎರಡು ಪದಗಳು "ಭರತವರ್ಷ". ಹಿಂದಿನ ಎಲ್ಲರೂ "ಭರತ" ಪದದ ಕಡೆಯೇ ಗಮನ ಹರಿಸಿ, ಅದು ಒಬ್ಬ ಮಾನವನ ಹೆಸರಿರಬೇಕು ಎಂದು ಆ ಕಡೆ ತಿರುಗಿದ್ದರೆ, ನಾನು ಎರಡನೆಯ ಪದವಾದ 'ವರ್ಷ' ಎಂದರೇನು? ತಕ್ಷಣ ಎಲ್ಲರೂ ಇದು ಸೂರ್ಯನ ಸುತ್ತ ಭೂಮಿ ತಿರುಗುವ ಕಾಲ ಎಂದು ಬಿಡುತ್ತಾರೆ. ಆದರೆ ನಾನು "ವರ್ಷ"ವನ್ನು ಅದರ ಸಿಪ್ಪೆ ಬಿಡಿಸಿ, ಯಾವ ಧಾತುವಿನಿಂದ ಈ ಪದ ಬಂದಿದೆ ಎಂದು ನೋಡಿದಾಗ, ಅದು "ವಾರಿ" ಎಂಬ ಧಾತುವಿನಿಂದ ಬಂದಿದ್ದು ತಿಳಿಯುತ್ತದೆ. ಸಂಸ್ಕೃತದಲ್ಲಿ 'ವಾರಿ' ಎಂದರೆ ನೀರು. 'ವಾರಿಷ' ಎಂದರೆ ಮಳೆ. 'ವಾರಿಷ' ವರ್ಷವಾಯಿತು.


ಹೌದು, ನಾವು ಮೊದಲಿಂದಲೂ ಕಾಲವನ್ನು ಗುರುತಿಸುತ್ತಿದ್ದುದು ಮಳೆಯಿಂದಲೇ. "ಮುಂಗಾರು" ಭೂಮಿ ಸೂರ್ಯನ ಸುತ್ತ ತಿರುಗುವ ಒಂದು ಗುರುತಾಯಿತು. ಮಗು ಹುಟ್ಟಿ ಒಂದು "ಮಳೆ - ವರ್ಷ" ವಾಯಿತು. ಆಮೇಲೆ ವರ್ಷ ವೆಂದರೆ ಮಳೆ ಎನ್ನುವುದು ಮರೆತು ಹೋಗಿ, ಅದು year ಎಂದಾಗಿದೆ. ಸಂಸ್ಕೃತದ 'ವಾರಿ', ಜರ್ಮನ್ ನಲ್ಲಿ "ವಾಸ್ಸರ್" ಆಗಿದೆ, ಅದೇ ಇಂಗ್ಲೀಷ್ ನಲ್ಲಿ "ವಾಟರ್" ಆಗಿದೆ. ಹಿಂದಿಯಲ್ಲಿ 'ವಾರಿಷ್', 'ಬಾರಿಷ್' ಆಗಿದೆ. ಈಗ 'ವರ್ಷ'ವೆಂದರೆ ಮಳೆ ಎಂದಾಯಿತು ಹಾಗಿದ್ದರೆ "ಭರತವರ್ಷ " ಎಂದಾಗ ನಮ್ಮ ಭೂಗೋಳವನ್ನು ಹೇಳಿದ್ದಾರೆ. ಇದು ಒಂದು ದ್ವೀಪ, ಅಂದರೆ ಸುತ್ತಲೂ ಕಡಲಿರುವ ಗಡ್ಡೆ, "ಖಂಡೇ" ಅಂದರೆ ಒಂದು ತುಂಡಾದ ನಾಡು. ಇದನ್ನು ಇಂದು ನಾವು ನಮ್ಮ ಭೂಪಟದಲ್ಲಿ ನೋಡೋಣ.





ನಮ್ಮ ನಾಡು ಹೇಗೆ ಕಾಣುತ್ತದೆ?

ಇದು ಸುತ್ತಲೂ ಕಡಲಿರುವ, ಮತ್ತು ಉತ್ತರದಲ್ಲಿ ಬೆಟ್ಟಗಳ ಸಾಲಿರುವ ಒಂದು 'ಪರ್ಯಾಯದ್ವೀಪ'. ಈ ನಾಡು ಹೇಗಿದೆ? ಇದರ ಸುತ್ತಲಿರುವ ನಾಡುಗಳು ಹೇಗಿವೆ? ಎಂದು ನೋಡಿ. ಈ ನಾಡು ನದಿಗಳ ಸಮೂಹವಿರುವ ಹಸಿರಾಗಿರುವ ನಾಡು. ನೀರು ಎಲ್ಲಿರುತ್ತದೆಯೋ ಅಲ್ಲಿಯೇ ಗಿಡಮರಗಳು, ಪ್ರಾಣಿಗಳು ಇರುತ್ತವೆ. ಇದರ ಅಕ್ಕ ಪಕ್ಕದಲ್ಲಿರುವ ನಾಡುಗಳು ಏಷಿಯಾದಲ್ಲಿ ಎಂತಿವೆ?

ಅರೇಬಿಯಾ, ಪರ್ಷಿಯಾ, ಇರಾನ್, ಆಫ್ ಘಾನಿಸ್ತಾನ್, ತುರ್ಕ್ ಮೆನಿಸ್ತಾನ್, ಉಜ್ ಬೆಕಿಸ್ತಾನ್, ಕಜಕ್ ಸ್ತಾನ್, ಸೈಬೇರಿಯಾ, ಟಿಬೆಟ್, ಪಶ್ಚಿಮ ಚೀನಾ, ಮಂಗೋಲಿಯಾ, ಎಲ್ಲವೂ ಬರಗಾಡು. ಇಲ್ಲಿ ನದಿಗಳೇ ಕಡಿಮೆ ಅಂತೆಯೇ ಹಸಿರು ಕಡಿಮೆ. ಈಗ ನಾವು 'ಮಳೆ -ವರ್ಷ' ಈ ಏಷಿಯಾದಲ್ಲಿ ಎಲ್ಲಿಂದ, ಎಲ್ಲಿ, ಹೇಗೆ ಬರುತ್ತದೆ? ಈ ಕೆಳಗೆ ಮುಂಗಾರು ತರುವ ಗಾಳಿಯನ್ನು ಅದರ ನಿಟ್ಟನ್ನೂ ನೋಡಿ.




ಎಲ್ಲಾ ಮಳೆ ಗಾಳಿ, ಸುಡುತ್ತಿರುವ ಉತ್ತರ ಆಫ್ರಿಕಾ, ಅರೇಬಿಯಾ, ಇರಾನ್ ಗಳನ್ನು ತಪ್ಪಿಸಿಕೊಂಡು, ನಮ್ಮ ಖಂಡದೆಡೆಗೆ ಹಾರಿ ಬಂದು, ಹಿಮಾಲಯ ಬೆಟ್ಟದ ಸಾಲಿಗೆ ಹೊಡೆದು ಮತ್ತೆ ಹಿಂದಿರುಗುತ್ತದೆ. ಬರ್ಮಾ ಥಾಯಲೆಂಡ್ ಗಳಿಗೂ ತುಸು ಮಳೆ ಹೋಗುತ್ತದೆ.

ಹಿಮಾಲಯ ನಮ್ಮ ನಾಡಿಗೆ ಒಂದು ವರವಾಗಿ ನಿಂತಿದೆ. ಅಲ್ಲಿ ಮಳೆ ಸುರಿದು ನದಿಗಳಾಗಿ ದಕ್ಷಿಣದತ್ತ ಕಡಲಿಗೆ ಸಾಗುತ್ತವೆ. ಅಂತೆಯೇ ಪಶ್ಚಿಮ ಘಟ್ಟಗಳೂ ಕೂಡ ಈ ಮಳೆಗಾಳಿಯನ್ನು ತಡೆದು ನೀರನ್ನು ಹರಿಸಿ ನದಿಗಳನ್ನು ತುಂಬುತ್ತವೆ.

ಹೀಗಾಗಿ ಈ ನಾಡು 'ವರ್ಷ' ತುಂಬಿದ ನಾಡು, 'ತುಂಬಿದ' ಎಂದರೇನು? "ಭರಿತ" ಇಂತು, "ವರ್ಷ ಭರಿತ" ನಾಡು 'ಭರತ ವರ್ಷ' - 'ಭರತ ವರ್ಷ' ಇದರಲ್ಲಿ ಯಾವ ರಾಜನ ಕಥೆಯೂ ಇಲ್ಲ. ಕೇವಲ 'ವರುಣ' ರಾಜನ ಕೃಪೆ ಮಾತ್ರ. 'ವರುಣ' ಎಂಬ ಹೆಸರೂ ಕೂಡ 'ವಾರಿ' ಇಂದಲೇ ಬಂದಿದ್ದು.

ಇದರಿಂದಲೇ ಹಿಮಾಲಯದ ಮೇಲೆ 'ಶಿವಶಂಕರ' ಕೂತಿದ್ದು ತನ್ನ ಜಟೆಯಲ್ಲಿ ಗಂಗೆಯನ್ನು ಕಟ್ಟು ಹಾಕಿ, ಆಮೇಲೆ ತನ್ನ ಜಟೆಯಿಂದ ಅವಳನ್ನು ಬಿಟ್ಟ ಎನ್ನುವ ಕಥೆಯೂ ಕೂಡ ಈ ಭೂಗೋಳದ ವರದಿಂದಲೇ ಬಂದಿದ್ದು. ನಮ್ಮ ಪೂರ್ವಜರು, ವಿಚಾರವಂತರು,. ಅವರು ನಮ್ಮ ಭೂಗೋಳ, ಖಗೋಳಗಳನ್ನು ಚೆನ್ನಾಗಿ ತಿಳಿದಿದ್ದರು. ಅವರ ತಿಳಿವಳಿಕೆಯನ್ನು ಮತ್ತೆ ನಾವು ಪಡೆಯಬೇಕಾದರೆ, ಆಚಾರಗಳನ್ನು ಹಿಂದಿಟ್ಟು ವಿಚಾರದಲ್ಲಿ ತೊಡಗಬೇಕು. ಆಗ ಎಲ್ಲವೂ ಸುಗಮವಾಗಿ ತಿಳಿಯಾಗಿ ತೋರುತ್ತದೆ.

ಈ ವರ್ಷ ಭರಿತ ನಾಡಲ್ಲಿ ಈಗ ನೀರಿಗೆ ಬೆಲೆ ಇಲ್ಲದಾಗಿ, ಸಿಕ್ಕಾಪಟ್ಟೆ ಚೆಲ್ಲುತ್ತಿದ್ದೇವೆ. ಕೆರೆಗಳನ್ನು ತೆರವು ಮಾಡಿ ಕೇವಲ ಮನೆಗಳನ್ನು ಕಟ್ಟುತ್ತಿದ್ದೇವೆ. ಆಮೇಲೆ ವರ್ಷ ಬಂದು ಮತ್ತೆ ಕೆರೆಗಳನ್ನು ತುಂಬಿದಾಗ, "ಅಯ್ಯೋ ನೋಡಿ , ಸರ್ಕಾರದವರು ಏನೂ ಮಾಡುತ್ತಿಲ್ಲ" ಎಂದು ಗೋಳಾಡುತ್ತೇವೆ. ಮನೆ ಕೊಳ್ಳುವಾಗ, ಅದು ಹಿಂದೆ ಕೆರೆ ಇದ್ದ ಜಾಗವಾಗಿತ್ತೇ? ಎಂದು ಕೇಳಿ. ಆಮೇಲೆ ಕೊಳ್ಳಿ. ನೀರಿಗೆ ಯಾವ ತಡೆಯೂ ಇಲ್ಲ ನಮ್ಮ ನಾಡು "ಭರಿತ ವರ್ಷ".

# ಸ್ವಾತಂತ್ರ್ಯದ ಅಮೃತ ಮಹೋತ್ಸವ



**✍ ನಾರಾಯಣ ನವಿಲೇಕರ್**

**ಆಗಸ್ಟ್ ೧೫, ೨೦೨೨**

## ರಸಪ್ರಶ್ನೆಗಳು

**೧. ಮುಂಬಯಿಯ ಗೋವಾಲಿಯಾ ಟ್ಯಾಂಕ್ ಮೈದಾನಕ್ಕೆ ಆಗಸ್ಟ್ ಕ್ರಾಂತಿ ಮೈದಾನ ಎಂದು ಏಕೆ ಹೆಸರು ಬಂದಿದೆ?**

ಉತ್ತರ: ಇದೇ ಮೈದಾನದಿಂದಲೇ ಗಾಂಧೀಜಿ “ಬ್ರಿಟಿಶರೇ, ಭಾರತ ಬಿಟ್ಟು ತೊಲಗಿ” (Quit India) ಎಂಬ ದೇಶವ್ಯಾಪೀ ಚಳುವಳಿಯನ್ನು ಆಗಸ್ಟ್ ೮, ೧೯೪೨ರಂದು ಪ್ರಾರಂಭಿಸಿದರು. ಇದರ ನೆನಪಿನಲ್ಲಿ ಈ ಮೈದಾನಕ್ಕೆ ಆಗಸ್ಟ್ ಕ್ರಾಂತಿ ಮೈದಾನ ಎಂಬ ಹೆಸರಿಡಲಾಗಿದೆ.

**೨. ಭಾರತದ ಸಂವಿಧಾನದ ಮೊಟ್ಟ ಮೊದಲ ಕರಡನ್ನು ತಯಾರಿಸಿದವರು ಯಾರು? (ಉತ್ತರ ನೀವು ಅಂದುಕೊಂಡದ್ದಲ್ಲ. ಯೋಚಿಸಿ ಹೇಳಿ !!)**




ಉತ್ತರ: ಇವರೊಬ್ಬ ಕನ್ನಡಿಗ. ಶ್ರೀ ಬೆನಗಲ್ ನರಸಿಂಗರಾವ್. ಇವರು ಸಂವಿಧಾನ ರಚನೆಯ ಸಮಯದಲ್ಲಿ ಸಂವಿಧಾನ ಸಲಹಾಗಾರರಾಗಿದ್ದರು. ದಕ್ಷಿಣ ಕನ್ನಡದ ಕಾರ್ಕಳದಲ್ಲಿ ಜನಿಸಿ, ಮುಂದೆ ನ್ಯಾಯತಜ್ಞರಾಗಿ ಹೆಸರು ಮಾಡಿದವರು.

*(ಭಾರತಕ್ಕೆ ಸ್ವಾತಂತ್ರ್ಯ ಬರುವ ಸುಮಾರಿಗೆ ಅಂದಿನ ಸರಕಾರ (Constituent Assembly) ಸ್ವತಂತ್ರ ಭಾರತದ ಸಂವಿಧಾನದ ರಚನೆಗಾಗಿ ವಿವಿಧ ವಿಷಯಗಳ ಬಗ್ಗೆ ಪರಿಶೀಲನೆಗಾಗಿ ಕೆಲವು ಉಪಸಮಿತಿಗಳನ್ನು ರಚಿಸಿತು. ಈ ಉಪಸಮಿತಿಗಳು ತಮ್ಮ ಪರಿಶೀಲನೆಯ ನಂತರ ವರದಿಗಳನ್ನು ಸಲ್ಲಿಸಿವು. ಶ್ರೀ ಬೆನಗಲ್ ನರಸಿಂಗರಾಯರು ಈ ವರದಿಗಳ ಅಂಶಗಳನ್ನೆಲ್ಲಾ ಸೇರಿಸಿ ಒಟ್ಟು ಸಂವಿಧಾನದ ಮೊಟ್ಟಮೊದಲ ಕರಡನ್ನು ತಯಾರಿಸಿದರು. ಇದನ್ನು ಡಾ. ಅಂಬೇಡ್ಕರ್ ನೇತೃತ್ವದ ಸಂವಿಧಾನ ಕರಡು ಸಮಿತಿ ಪರಿಶೀಲಿಸಿ, ಸೂಕ್ತವಾಗಿ ಬದಲಾಯಿಸಿ, ಸಮಿತಿಯ ಅಧಿಕೃತ ಕರಡು ಪ್ರತಿಯನ್ನು Constituent Assemblyಗೆ ಸಲ್ಲಿಸಿತು. ಇಲ್ಲಿ ಅನೇಕ ಚರ್ಚೆ ತಿದ್ದುಪಡಿಗಳ ನಂತರ ನಮ್ಮ ಸಂವಿಧಾನ ತಯಾರಾಯಿತು.)*

***೩. ಖಿಲಾಫತ್ ಚಳುವಳಿ ಯಾವ ಕಾರಣಕ್ಕಾಗಿ ನಡೆಯಿತು? ನಮ್ಮ ಸ್ವಾತಂತ್ರ್ಯ ಹೋರಾಟಕ್ಕೆ ಇದರ ಸಂಬಂಧವೇನು?***

*ಉ: ಎರಡನೆಯ ಮಹಾಯುದ್ಧದ ಕಾಲದಲ್ಲಿ ಬ್ರಿಟನ್ ತುರ್ಕಿ ದೇಶವನ್ನು ವಶಪಡಿಸಿಕೊಂಡಿದ್ದನ್ನು ಪ್ರತಿಭಟಿಸಿ ಭಾರತೀಯ ಮುಸಲ್ಮಾನರುಗಳು ಭಾರತದಲ್ಲಿ ಬ್ರಿಟಿಷರ ವಿರುದ್ಧ ನಡೆಸಿದ ಆಂದೋಲನ “ಖಿಲಾಫತ್ ಚಳುವಳಿ”. ಇಸ್ಲಾಮಿನ ಪರಮಾಧಿಕಾರಿ ಖಲೀಫನಿದ್ದ ದೇಶ ತುರ್ಕಿ . ಬ್ರಿಟನ್ ಈ ಖಲೀಫನಿಗೆ ತುರ್ಕಿ ದೇಶದ ಆಡಳಿತವನ್ನು ವಾಪಸು ಕೊಡಬೇಕು ಎಂಬುದು ಈ ಚಳುವಳಿಯ ಉದ್ದೇಶ. ಇದಕ್ಕೂ ನಮ್ಮ ಸ್ವಾತಂತ್ರ ಚಳುವಳಿಗೂ ಲವಲೇಶವೂ ಸಂಬಂಧವಿರಲಿಲ್ಲ. ಗಾಂಧೀಜಿ ಇದನ್ನು ಕಾಂಗ್ರೆಸ್ ಪಕ್ಷಕ್ಕೆ ಬಲವಂತವಾಗಿ ಎಳೆದು ತಂದು “ಅಸಹಕಾರ ಚಳುವಳಿ” ಎಂಬುದಾಗಿ ಮಾರ್ಪಡಿಸಿದರು.*

***೪. ನಾರಾಯಣ ಆಪ್ಟೆ ಎಂಬ ಹೆಸರು ಯಾವ ಕಾರಣಕ್ಕಾಗಿ ಇತಿಹಾಸದಲ್ಲಿ ಸೇರಿದೆ?***

*ಗಾಂಧಿ ಹತ್ಯೆ ಮಾಡಿದ ಮುಖ್ಯ ದೋಷಿಗಳಲ್ಲೊಬ್ಬ ನಾರಾಯಣ ಆಪ್ಟೆ. ನಾಥೂರಾಮ್ ಗೋಡ್ಸೆಯೊಂದಿಗೆ ಈತನಿಗೂ ಗಲ್ಲು ಶಿಕ್ಷೆಯಾಯಿತು.*

***೫. ೧೮೫೮ರಲ್ಲಿ ಭಾರತದ ಆಡಳಿತ ಈಸ್ಟ್ ಇಂಡಿಯಾ ಕಂಪನಿಯಿಂದ ಇಂಗ್ಲೆಂಡಿನ ರಾಣಿಯ ನೇರ ನಿಯಂತ್ರಣಕ್ಕೆ ಬಂತು. ಈ ನಿರ್ಧಾರದ ದೇಶದಲ್ಲೇ ಮೊಟ್ಟಮೊದಲ ಸಾರ್ವಜನಿಕ ಘೋಷಣೆಯಾದದ್ದು ಮುಂಬಯಿಯಲ್ಲಿ. ಯಾವ ಕಟ್ಟಡದ ಎದುರಿನಲ್ಲಿ?***

*ಟೌನ್ ಹಾಲ್ (ಏಶಿಯಾಟಿಕ್ ಸೊಸೈಟಿ) ಕಟ್ಟಡದ ಎದುರಿನ ಮೆಟ್ಟಿಲುಗಳ ಕೊನೆಯ ಮೆಟ್ಟಿಲಿನಿಂದ. ಮುಂಬಯಿ ಗವರ್ನರ್ ಲಾರ್ಡ್ ಎಲ್ಫಿನ್‌ಸ್ಟನ್‌ನಿಂದ. ಈ ಕಟ್ಟಡ ಕಟ್ಟಿ ಆಗಲೇ ಸುಮಾರು ಮೂವತ್ತು ವರ್ಷಗಳಾಗಿದ್ದವು.*


*೬. ಈ ವ್ಯಕ್ತಿಗಳು ಯಾರು?*



1. *ಲಾಹೋರ್ ಜೈಲಿನಲ್ಲಿ ಭಾರತೀಯ ಸೆರೆಯಾಳುಗಳಿಗೆ ಆಗುತ್ತಿದ್ದ ಅನ್ಯಾಯ ಪ್ರತಿಭಟಿಸಿ ೬೩ ದಿನಗಳ ಉಪವಾಸ ಸತ್ಯಾಗ್ರಹ ಮಾಡಿ ಮರಣ ಹೊಂದಿದ ಕ್ರಾಂತಿಕಾರಿ ಭಾರತೀಯ ಯಾರು?*

*ಉತ್ತರ: ಜತಿನ್ ದಾಸ್*

2. **ಬಂಗಾಳದಲ್ಲಿ ಆಗರ್ಭ ಶ್ರೀಮಂತ ಮನೆತನದಲ್ಲಿ ಹುಟ್ಟಿ, ಇಂಗ್ಲೆಂಡಿನಲ್ಲಿ ಬಾಲ್ಯಕಾಲದಿಂದಲೇ ಇದ್ದು, ಓದಿ ಅಂದಿನ ಪ್ರತಿಷ್ಠಿತ ICS ಪರೀಕ್ಷೆಯಲ್ಲಿ ಕುದುರೆ ಸವಾರಿ ಪರೀಕ್ಷೆಗೆ ಹೋಗದ ಕಾರಣ ಅನುತ್ತೀರ್ಣ. ವಾಪಸಾದ ಮೇಲೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗ. ಇದಕ್ಕಾಗಿ ಜೈಲು ಶಿಕ್ಷೆ. ನಂತರ ಯೋಗ ಆಧ್ಯಾತ್ಮಗಳ ಕಡೆ ಮನಸ್ಸು ತಿರುಗಿ ದಕ್ಷಿಣ ಭಾರತದ ಸಣ್ಣ ಊರಿನಲ್ಲಿ ಆಧ್ಯಾತ್ಮ ಸಾಧನೆಯಲ್ಲಿ ನಿರತ. ಈ ಊರು ಇಂದಿಗೂ ಅಸಂಖ್ಯ ಅನುಯಾಯಿಗಳನ್ನು ದೇಶ ವಿದೇಶಗಳಿಂದ ಆಕರ್ಷಿಸುತ್ತಿದೆ. ಈ ವ್ಯಕ್ತಿ ಯಾರು?**




ಉತ್ತರ: ಅರವಿಂದ ಘೋಷ್. ಆ ಊರು ಪಾಂಡಿಚೆರಿ.




***3.*** ***ಇಪ್ಪತ್ತೆರಡರ ತರುಣ. ಬಟ್ಟೆ ಗಿರಣಿ ಕೆಲಸಗಾರ. ಮುಂಬಯಿಯಲ್ಲಿ ವಿದೇಶೀ ಬಟ್ಟೆಗಳ ಬಹಿಷ್ಕಾರದ ಸಮಯದಲ್ಲಿ, ವಿದೇಶಿ ಬಟ್ಟೆಗಳನ್ನು ಹೊತ್ತ ಟ್ರಕ್ ಮುಂದೆ ನಿಂತು ಪ್ರತಿಭಟಿಸಿದ. ಪೋಲೀಸ್ ಬೆದರಿಕೆಗೂ ಮಣಿಯಲಿಲ್ಲ. ಬಿಳಿಯ ಪೋಲೀಸ್ ಅಧಿಕಾರಿ ಟ್ರಕ್ ಅವನ ಮೇಲೆಯೇ ಚಲಾಯಿಸಿದ. ಈ ತರುಣ ಹುತಾತ್ಮನಾದ.***

*ಉತ್ತರ: ಬಾಬು ಗಣಿ. ಕಾಲ್ಬಾದೇವಿಯಲ್ಲಿ ಇವತ್ತಿಗೂ ಇವನ ಹೆಸರಿನ ರಸ್ತೆಯಿದೆ. KEM ಆಸ್ಪತ್ರೆಯ ಹತ್ತಿರ ಇವನ ಎದೆಮಟ್ಟದ ಪ್ರತಿಮೆಯಿದೆ.*

***4.*** ***ಬ್ರಿಟಿಷ್ ನೌಕಾಯಾನ ಏಕಸ್ವಾಮ್ಯದ ವಿರುದ್ಧ Swadeshi Steam Navigation Company ಸ್ಥಾಪಿಸಿ, ತಮಿಳುನಾಡಿನ ತೂತ್ತುಕುಡಿ (Tuticorin) ಮತ್ತು ಕೊಲಂಬೋ ನಡುವೆ ಯಶಸ್ವಿಯಾಗಿ ನೌಕಾಯಾನ ಪ್ರಾರಂಭಿಸಿದವರು. ನಂತರ ರಾಜದ್ರೋಹದ ಆರೋಪದ ಮೇಲೆ ಬ್ರಿಟಿಷರಿಂದ ಜೀವಾವಧಿ ಶಿಕ್ಷೆಗೆ ಒಳಗಾದವರು.***




*ಉತ್ತರ: V.O. ಚಿದಂಬರಂ ಪಿಳ್ಳೈ. ಇಂದಿನ ತೂತ್ತುಕುಡಿ ಬಂದರಿಗೆ ಇವರ ಹೆಸರನ್ನೇ ಇಡಲಾಗಿದೆ.*




***5.*** ***ಆಂಧ್ರ ಪ್ರದೇಶದಲ್ಲಿ ಜನನ. ಬ್ರಿಟಿಷ್ ಸರಕಾರದ ವನವಾಸಿ ವಿರೋಧಿ ನೀತಿಗೆ ಪ್ರತಿಭಟನೆಯಾಗಿ, ವನವಾಸಿಗಳನ್ನು ಸಂಘಟಿಸಿ, ಬ್ರಿಟಿಷ್ ಮದ್ದುಗುಂಡು ಉಗ್ರಾಣಗಳನ್ನು ಪದೇ ಪದೇ ಲೂಟಿ ಮಾಡಿ ಬ್ರಿಟಿಷರಿಗೆ ಸಡ್ಡು ಹೊಡೆದವನು. ಇವನನ್ನು ಹಿಡಿಯಲು ಬ್ರಿಟಿಷರು ವರ್ಷಗಟ್ಟಲೆ, ಸುಮಾರು ೪೦ ಲಕ್ಷ ಖರ್ಚು ಮಾಡಿ, ಶ್ರಮಿಸುತ್ತಾರೆ. ಈತ ಕೊನೆಗೂ ಸಿಕ್ಕಿಬಿದ್ದು ಮರಣದಂಡನೆಗೆ ಗುರಿಯಾಗುತ್ತಾನೆ. ಈತ ಯಾರು?***

*ಉತ್ತರ: ಅಲ್ಲೂರಿ ಸೀತಾರಾಮರಾಜು*

# ದೇಹಾಂತ



✍ **ಉಮಾ ರಾವ್**

ರಾಜೀವನಿಗೆ ಆದ ತಳಮಳ ಶ್ರೀಪಾದು ಮಾಮನ ಸಾವಿನ ಸುದ್ದಿ ಕೇಳಿದ ತಕ್ಷಣ ಆದ ದುಃಖದಿಂದಲ್ಲ. ಆಗದ ದುಃಖದಿಂದ. ಹಾಗೆ ನೋಡಿದರೆ, ಶ್ರೀಪಾದು ಮಾಮ ಹೋದ ಸುದ್ದಿ ಕೇಳಿದ ತಕ್ಷಣ ತನಗೆ ಆಘಾತ ಆಗಬೇಕೆಂದು ರಾಜೀವ ಮನಸ್ಸಿನಲ್ಲಿ ನಿರೀಕ್ಷೆ ಮಾಡದೆ ಹೋಗಿದ್ದರೆ, ಈ ಪ್ರತಿಕ್ರಿಯೆಯ ಬಗ್ಗೆ ಅವನಿಗೆ ಅಪರಾಧಿ ಪ್ರಜ್ಞೆ, ಆಶ್ಚರ್ಯ, ತಳಮಳ ಇತ್ಯಾದಿ ಭಾವನೆಗಳು ನುಗ್ಗಿ ಬರಬೇಕಾಗೇ ಇರಲಿಲ್ಲ.

ಆಫೀಸಿನಿಂದ ಬಂದು ಶೂ ಬಿಚ್ಚುತ್ತಿರುವಾಗಲೇ, ರಮಾ ಕೈಲಿಟ್ಟ ಕಾಗದ, ಅವಳ ಪೆಚ್ಚು ಮುಖ ನೋಡಿ ಏನೋ ಕೆಟ್ಟ ಸುದ್ದಿ ಕಾದಿರಬೇಕೆಂದು ಅವನಿಗೆ ತಿಳಿದು ಬಂದಿತ್ತು. ಛೆ... ಆರಾಮವಾಗಿ ಕಾಫಿ ಕುಡಿದು, ಸ್ವಲ್ಪ ರಿಲ್ಯಾಕ್ಸ್ ಮಾಡೋಣ ಅಂದ್ರೆ ಇನ್ನೇನು ಕಾದಿದೆಯೋ! ಅಕ್ಷರಗಳ ಮೇಲೆ ಕಣ್ಣೋಡಿಸಿ ತಲೆ ಎತ್ತಿದಾಗ ಅವನ ಅಸಹನೆಯ ಮುಖ ನೋಡಲು ಅದೃಷ್ಟವಶಾತ್ ರಮಾ ಎದುರಿಗಿರಲಿಲ್ಲ. ಕಾಗದ ಕಿವುಚಿ ನೆಲದ ಮೇಲೆಸೆದು ಉಸ್ಸೆಂದು ಗೋಡೆಗೆ ತಲೆಯಾನಿಸಿ ಹೊಂದೊರಗಿದ.

ರಮಾ ಕಾಫಿಯೊಂದಿಗೆ ಬಂದವಳು "ಆಗ್ಲೇ ಹತ್ತು ದಿನ ಆಗೋಗಿದೆ.... ಪಾಪ.... ಅನ್ಯಾಯ.... ಅಂಥಾ ಕಾಯಿಲೇನೂ ಆಗಿರಲಿಲ್ಲ....."ಎಂದಳು.

"ಹೆಂಡತಿ ಮಕ್ಕಳು ಮರಿ ಕೂಡ ಇರಲಿಲ್ಲ... ಆರಾಮವಾಗಿದ್ದ... ದೇವರು ಆಯಸ್ಸು ಕೊಡಲಿಲ್ಲ...." ಎಂದಳು.

"ಏನು ಮಹಾ ವಯಸ್ಸು... ಹಾಯಾಗಿ ತಿಂದು ತಿರುಗಿ ಓಡಾಡಿಕೊಂಡಿರೋ ಕಾಲಕ್ಕೆ ಕಣ್ಮುಚ್ಚಿಕೊಂಡ..." ಎಂದಳು.

"ಪ್ರತಿಸಲ ಯಾರು ಬೊಂಬಾಯಿಯಿಂದ ಆ ಕಡೆ ಹೋದರೂ.... ರಾಜೀವ ಅವನ ಹೆಂಡತಿ ಮಕ್ಕಳನ್ನು ನೋಡಿ ಎಷ್ಟು ವರ್ಷಗಳಾಗೋಯ್ತು ಎಂದು ಹಲಬ್ತಾನೇ ಇದ್ದ..." ಎಂದಳು.

ರಾಜೀವನ ಕೈಗೆ ಲೋಟ ಬರುವ ಹೊತ್ತಿಗೆ, ಕಾಫಿ ಸ್ವಲ್ಪ ಆರಿತ್ತು. ಒಂದು ಗುಟುಕು ಹೀರಿದವನೇ "ಥತ್, ಎಷ್ಟು ಸಲ ನಿಂಗೆ ಹೇಳಬೇಕು... ನಿಂಗೊತ್ತಿಲ್ವೆ... ನಂಗೆ ಕಾಫಿ ಬಿಸಿಬಿಸಿ ಇರಬೇಕೂಂತ" ಎಂದು ಗದರಿದ.

ರಮಾ ಮಾತಿಲ್ಲದೆ ಅವನ ಕೈಯಿಂದ ಕಾಫಿ ಲೋಟ ತೆಗೆದುಕೊಂಡು ಮತ್ತೆ ಬಿಸಿ ಮಾಡಿ ತರಲು ಅಡಿಗೆ ಮನೆಗೆ ನಡೆದಳು. ಹೂ.. ಅಂದುಕೊಳ್ಳುತ್ತಿರಬೇಕು.. ಸೋದರ ಮಾಮ, ಪ್ರತಿ ಭಾನುವಾರ ಮೈಸೂರಿಗೆ ಬರುವಾಗ ತನ್ನ ಪ್ರೀತಿಯ ಸೋಹನ್ ಪಾಪಡಿ, ಚಕ್ಕುಲಿ, ಬೆಣ್ಣೆ ಬಿಸ್ಕತ್ತಿನ ಪೊಟ್ಟಣ ಕೈಲಿ ಹಿಡಿದೇ ಬರುತ್ತಿದ್ದ. "ಶ್ರೀಪಾದು ಮಾಮ ಬಂದ... ಶ್ರೀಪಾದು ಮಾಮ ಬಂದ..." ತಾನು ಜಮುನಾ ಗೇಟಿನಲ್ಲಿ ಅವನನ್ನು ಕಂಡ ತಕ್ಷಣ ಅಡಿಗೆ ಮನೆಯಲ್ಲಿರುತ್ತಿದ್ದ ಅಮ್ಮನಿಗೆ ಸುದ್ದಿ ಮುಟ್ಟಿಸುತ್ತಿದ್ದೆವು. ಭಾನುವಾರಗಳು ಬರುವುದೇ ಶ್ರೀಪಾದು ಮಾಮನಿಗೋಸ್ಕರ ಎಂದು ತಮಗೆ ಖಾತರಿಯಾಗಿತ್ತು.

ತಾನು ದೊಡ್ಡವನಾದಂತೆ ತನ್ನೆಲ್ಲಾ ಮಾಮಂದಿರಿಗೂ ಮದುವೆಯಾಗಿ ಮಾಮಿಯರು ಬಂದಿದ್ದರು. ಆದರೆ ಶ್ರೀಪಾದು ಮಾಮನಿಗೆ ಮದುವೆಯೇ ಆಗಿರಲಿಲ್ಲ. ಒಂದು ರೀತಿಯಲ್ಲಿ ಆಗ ತನಗೆ ಖುಷಿಯಾಗಿದ್ದೂ ಉಂಟು. ಬೇರೆಲ್ಲಾ ಮಾಮಂದಿರು ಮಾಮಿಯರು ಬಂದ ತಕ್ಷಣ ಮೈಸೂರಿಗೆ ಬರುವುದು. ತನಗೆ ಮುದ್ದು ಮಾಡುವುದು ಕಡಿಮೆಯಾಗಿತ್ತು. ಆದರೆ ಶ್ರೀಪಾದು ಮಾಮ ಯಾವ ಮಾಮಿಯ ಪಾಲೂ ಆಗದೇ ಇದ್ದದ್ದು ಅವನ ಪೂರ್ತಿ ಪ್ರೀತಿ ತನಗೇ ಸಲ್ಲಿತ್ತು.

ಒಂದು ದಿನ ಬಾಗಿಲ ಹಿಂದೆ ನಿಂತು ಕೇಳಿದ ಮಾತು, ಅಮ್ಮ ಬೇಸರ ಮಾಡಿಕೊಳ್ಳುತ್ತಿದ್ದಳು. "ಯಾವುದೋ ಹಾಳು ಹುಡುಗಿ ಹಿಂದೆ ಬಿದ್ದು ಅವಳು ಬೇರೆಯವನನ್ನು ಕಟ್ಟಿಕೊಂಡು ಹೋದ್ರೆ, ಶ್ರೀಪಾದು ಯಾಕೆ ಆಜನ್ಮ ಬ್ರಹ್ಮಚಾರಿ ಆಗಿರಬೇಕು..."

ಅಪ್ಪ ಸಮಾಧಾನ ಮಾಡಿದ್ದರು, "ಎಲ್ಲಾ ಸ್ವಲ್ಪ ದಿನ. ಆಮೇಲೆ ಅದಾಗದೇ ಸರಿ ಹೋಗುತ್ತೆ. ಅವನಿಗೆ ತಾನೇ ಏನು ವಯಸ್ಸು... 23. ಹಾಗನ್ನಿಸೋದು ಸಹಜ. ಲಕ್ಷಣವಾದ ಹುಡುಗಿ ಮುಖ ನೋಡಿದರೆ ಎಲ್ಲಾ ಸರಿಹೋಗುತ್ತೆ..."

"ದೇವರೇ.. ಸಧ್ಯ ಅವನು ಮದುವೆ ಆಗದೇನೇ ಉಳೀದ್ರೆ ಇದ್ರೆ ಸಾಕು... ನಿಮಗೆ ಅವನ ಹಠ ಗೊತ್ತಿಲ್ಲ..."

ಅಮ್ಮ ಮಾತು ಮುಗಿಸಿ ಹೊರಗೆ ಬಂದಾಗ,"ಇಲ್ಯಾಕೋ ಬಾಗಿಲಲ್ಲಿ ನಿಂತ್ಕೊಂಡು ದೊಡ್ಡೋರ ಮಾತು ಕೇಳ್ತೀದ್ದೀಯಾ..." ಎಂದು ಗದರಿಸಿದ್ದಳು.

"ಕಾಫಿ ಮತ್ತೆ ಆರಿ ಹೋಗುತ್ತೆ..." ರಮಾ ಹೆದರುತ್ತಲೇ ಜ್ಞಾಪಿಸಿದಳು.

"ಓ ಹೀಗೇ ಹಿಂದಿನದೆಲ್ಲಾ ಜ್ಞಾಪಕಕ್ಕೆ ಬಂತು. . ." ಎಂದ ರಾಜೀವ, ಲೋಟ ತುಟಿಯ ಹತ್ತಿರಕ್ಕೆ ತೆಗೆದುಕೊಂಡು ಹೋಗುತ್ತಾ, ಆ ಮಾತುಗಳಲ್ಲಿದ್ದ ಬೇಸರದ ಛಾಯೆ, ರಮಾಳ ಮುಖದ ಮೇಲೆ ಸಮಾಧಾನದ ಗೆರೆಗಳನ್ನು ಮೂಡಿಸಿದಂತೆ ಭಾಸವಾಯಿತು.

ಪೇಪರೋದಿ ಮುಗಿಸುವ ಹೊತ್ತಿಗೆ ಗಂಟೆ ಏಳೂವರೆ. ಹಾಗೇ ಹಾಸಿಗೆಯ ಮೇಲೆ ಅಡ್ಡಾದ ರಾಜೀವ. ಕಾಗದ ಬರೆಯಬೇಕು. ಶ್ರೀಪಾದರು ಮಾಮನ ಬಗ್ಗೆ ಸಂತಾಪ ಸೂಚಿಸಿ ಬರೆಯುವುದಾದರೂ ಯಾರಿಗೆ? ಹೆಂಡತಿ, ಮಕ್ಕಳು, ತಾಯಿ, ತಂದೆ ಯಾರೂ ಇಲ್ಲ. ಅಣ್ಣ, ತಮ್ಮ, ತಂಗಿಯರು ಹಚ್ಚಿಕೊಂಡಿಲ್ಲ. ಅದೂ ಅಷ್ಟು ಜನಕ್ಕೂ ಬರೆಯಲು ಸಾಧ್ಯವೇ? ರಾಜೀವನಿಗೆ ಹಾಯೆನಿಸಿತು. ಸಧ್ಯ, ಕೆಲಸವೊಂದು ಕಡಿಮೆಯಾಯ್ತಲ್ಲ... ಆದರೆ ತನಗೇಕೆ ಹೀಗಾಗಿ ಹೋಗಿದೆ? ಚಿಕ್ಕ ವಯಸ್ಸಿನಲ್ಲಿ ತನಗೋಸ್ಕರ ಎಷ್ಟು ಒದ್ದಾಡುತ್ತಿದ್ದ . ಈಗೇನೋ ನೋಡಿ ಹನ್ನೆರಡು ವರ್ಷಗಳಾಗಿರಬೇಕು. ಕೆಲಸ, ಮದುವೆ, ಮಕ್ಕಳು, ಜವಾಬ್ದಾರಿ.. ತನಗೆ ಊರಿಗೆ ಹೋಗಲು ಸಮಯವಾದರೂ ಎಲ್ಲಿತ್ತು? ಆ ಕಡೆ ಹೋಗಿ ಬಂದವರ ಹತ್ತಿರವೆಲ್ಲಾ ಶ್ರಿಪಾದು ಮಾಮ ಹಲಬುತ್ತಿದ್ದನಂತೆ. "ರಾಜೀವನ ಹೆಂಡತಿ ಮಕ್ಕಳನ್ನು ನೋಡಿ ಹನ್ನೆರಡು ವರ್ಷವಾಗಿ ಹೋಯ್ತು ಈ ಕಡೆ ಬಂದೇ ಇಲ್ಲ ಹೇಗಿದಾರೋ ಏನೋ...."

ಅಷ್ಟು ನೋಡಬೇಕೆನಿಸಿದರೆ ಅವನಾದರೂ ಬರಬಹುದಾಗಿತ್ತು. ತಾನು ಎಂದಾದರೂ ಬಾ ಎಂದಿದ್ದನೇ? ಅಷ್ಟು ಹಚ್ಚಿಕೊಂಡಿದ್ದವನಿಗೆ ತಾನು ಕರೆಯಬೇಕೆಂಬ ಫಾರ್ಮಾಲಿಟಿ. ಆದರೂ ಯಾಕೆ? ಆದರೆ ಅವನಿಗೆ ತನ್ನ ವಿಳಾಸ ಕೂಡ ಗೊತ್ತಿತ್ತೋ ಇಲ್ಲವೋ ತಾನೆಂದಾದರೂ ಅವನಿಗೆ ಎರಡು ಸಾಲು ಕಾಗದ ಬರೆದು ಹಾಕಿದ್ದನೇ?

ಇದ್ದಕ್ಕಿದ್ದಂತೆ ಟೇವಿಯ ಚಿತ್ರಹಾರ್ ಶುರುವಾಯಿತು. ಕಿಶೋರ್ ಕುಮಾರ್ ಜೋರಾಗಿ ಹಾಡುತ್ತಿದ್ದ. "ರಮಾ ಟೇವಿ ಆರಿಸೋಕೆ ಹೇಳು. ಇವತ್ತೂ ನೋಡದಿದ್ದರೆ ಪ್ರಾಣ ಹೋಗುತ್ತೇನೋ" ಹಿಂದಿನಿಂದ ಚಿಕ್ಕು ಓಡಿಬಂದಿದ್ದ "ಅಪ್ಪ ಚಿತ್ರಹಾರ್ ಯಾಕೆ ನೋಡ್ಬಾರ್ದು... ಇದೊಂದು ಹಾಡು..."

"ನಾ ಹೇಳಿದ ಮಾತು ಸುಮ್ಮನೆ ಕೇಳು, ಪ್ರಶ್ನೆಗಳನ್ನು ಹಾಕ್ಬೇಡ. ಶ್ರೀಪಾದು ಮಾಮ...." ರಮಾ ಮಧ್ಯೆ ಬಾಯಿ ಹಾಕಿದಳು. "ಇವತ್ತು ಹೋಗಲಿ ಬಿಡು ಚಿಕ್ಕು... ಅಪ್ಪನಿಗೆ ಬೇಜಾರಾಗಿದೆ..."

"ಅಪ್ಪ...ಶ್ರೀಪಾದು ಮಾಮ ಯಾರು... ನಮ್ಮ ಸುರೂ ಮಾಮನ ಥರಾನಾ...."
"ಹೌದು , ಹೌದು. ನಿಂಗೆ ಅದೆಲ್ಲಾ ಅರ್ಥವಾಗೋಲ್ಲ. ಸುಮ್ಮನೆ ಆಡ್ಕೋ ಹೋಗು, ಬೇಕಾದರೆ ಪಕ್ಕದ್ಮನೆಗೆ ಹೋಗು."
ಇಷ್ಟು ಹೊತ್ತಿನ ಮೇಲೆ ಪಕ್ಕದ ಮನೆಗೆ ಹೋಗಲು ಎಂದೂ ಇಲ್ಲದ ಪರ್ಮಿಷನ್ ಸಿಕ್ಕಿದ್ದರಿಂದ ಚಿಕ್ಕು ಸಂತೋಷದಿಂದ ಕುಣಿಯುತ್ತಾ ಓಡಿದ.
ರಮಾ ಕತ್ತಲಿನ ಕೋಣೆಯಲ್ಲಿ ಮೆಲ್ಲಗೆ ಬಂದಳು.
"ಊಟಕ್ಕಾದರೂ ಏಳ್ತೀರೇನು?"
"ಸರಿ.. ತಟ್ಟೆ ಹಾಕು...."
"ಕಾಗದ"
"ಯಾರಿಗೆ ಬರೆಯೋದು..."
"ನಮಗೆ ಸುದ್ದಿ ತಿಳಿಸಿದ ಕಾಶೀಗೆ ಬರೆಯೋದು..."
"ಕಾಶೀಗೆ! ಅವನೆಂಥಾ ಬಾದರಾಯಣ ಸಂಬಂಧಾಂತ..."
"ಬರೀದೇ ಇದ್ರೆ ಚೆನ್ನಾಗಿರೋಲ್ಲ..."
"ಸರಿ ಊಟವಾದ ಮೇಲೆ ಬರೀತೀನಿ."

ರಾಜೀವ ಮುಜುಗರಗೊಂಡ. ಇವಳೂ ತನ್ನನ್ನು ಪರೀಕ್ಷಿಸುತ್ತಿದ್ದಾಳೇನೋ. ಎಷ್ಟೋ ಸಲ ಹೇಳಿದ್ದಳು. "ನಿಮಗೆ ನಿಮ್ಮವರನ್ನು ಒಂದು ಸಲನಾದ್ರೂ ನೋಡಬೇಕು ಅನ್ನಿಸೋದೆ ಇಲ್ವೇ?...ವಿಚಿತ್ರಾಪ್ಪಾ, ಹನ್ನೆರಡು ವರ್ಷ ಆಯ್ತು... ಊರಿನ ಕಡೆ ಹೋಗಿ."

ಮಾತಿಲ್ಲದೆ ಊಟ, ಹಸಿವೇಯೇನೂ ಕಡಿಮೆಯಿರಲಿಲ್ಲ. ಗೊಜ್ಜು ರುಚಿಯಾಗಿದ್ದರಿಂದ ದಿನಕ್ಕಿಂತ ಹೆಚ್ಚಿಗೆಯೇ ಕಲಸಿಕೊಂಡ, ಸಾರು ಖಾರವೆನಿಸಿತು. ಆದರೆ ಹೇಳಲು ಧೈರ್ಯ ಬರಲಿಲ್ಲ. ಮತ್ತೆ ರೂಮಿಗೆ ಬಂದು ಹಾಸಿಗೆಯ ಮೇಲೆ ಉರುಳಿದ. ಹೊರಗಿನ ಬೀದಿಯ ದೀಪದ ಮಂದ ಬೆಳಕು ರೂಮನ್ನು ತುಂಬಿತ್ತು. ನಕ್ಷತ್ರಗಳು ಕಣ್ಣುಮುಚ್ಚಾಲೆಯಾಡುತ್ತಿದ್ದವು. ಎಂಥಾ ಸುಂದರ ರಾತ್ರಿ! ಪಕ್ಕದ ರೂಮಿನಲ್ಲಿ ಚಿಕ್ಕೂನ ಹಾಸಿಗೆಗೆ ಸೊಳ್ಳೆಪರದೆ ಇಳಿಬಿಡುತ್ತಿದ್ದ ರಮಾಳ ಬಳೆಗಳ ಕಿಣಿಕಿಣಿ ಶಬ್ದ. ಬೆಳಗ್ಗೆ ಬರ್ನಿ ಹತ್ತಿರ ಬಂದಾಗಲೂ ಇದೇ ರೀತಿ ಕಿಣಿಕಿಣೀ ಶಬ್ದ ಮಾಡಿದ್ದಳು. ಅಬ್ಬ.. ಎಂಥಾ ಹುಡುಗಿ, ಏನು ಮೈಮಾಟ, ಅಲಂಕಾರ, ಕುಲುಕುಲು ನಗು, ಕಣ್ಮಿಂಚು. ಇವತ್ತಂತೂ ಕಾರಣವಿಲ್ಲದೆ ನಾಲ್ಕಾರು ಸಲ ಮೈ ಸವರಿಕೊಂಡೇ ನಡೆದಿದ್ದಳು. ಕೊಂಕು ನೋಟ ಬೀರಿದ್ದಳು. "ಚೀಪ್ ಗರ್ಲ್" ಎಂದು ಆಫೀಸಿನವರ ಎದುರಿಗೆ ಅಂದಿದ್ದರೂ ಮೈ ಕಾವೇರಿದ್ದು ನಿಜ. ಆದರೆ ಧೈರ್ಯ ಬಂದಿರಲಿಲ್ಲ ಥತ್, ಆ ಥಾಮಸ್ ಥರಾ ದಿನಾ ಒಂದೊಂದು ಹೊಸ ಹುಡುಗಿಯ ಜೊತೆ ಫ್ಲರ್ಟ್ ಮಾಡಿ ಬಿಟ್ಟುಬಿಡುವ ಹಾಗಿದ್ದರೆ ಎಷ್ಟು ಚೆನ್ನಾಗಿತ್ತು. ಆದರೆ ಈಗಲೂ ಆ ರೀತಿಯ ಸಂಬಂಧಗಳೆಂದರೆ ಭಯ. ಹೆಂಡತಿ ಜೀವಮಾನವೆಲ್ಲಾ ಜೊತೆಯಲ್ಲಿ ರಬೇಕಾದವಳೊಂದಿಗೆ ಮಾತ್ರ ಎಲ್ಲ ಸಂಬಂಧಗಳೂ ಎಂಬ ವಿಚಾರ ಮೈತಳೆದುಹೋಗಿವೆ. "ನೀನೊಬ್ಬ ಹಿಪೋಕ್ರೈಟ್, ನೀನೇನು ಇಮೋಷನಲ್ ಅಡಲ್ಟ್ರಿ ಮಾಡೋಲ್ಲ ಅಂತಿಯೇನು? ನನ್ನನ್ನು ಫೂಲ್ ಮಾಡಬೇಡ" ಎಂದ ಥಾಮಸ್ ಮೇಲೆ ತುಂಬಾ ಕೋಪ ಬಂದಿತ್ತು. ಜೊತೆಗೆ ಹೊಟ್ಟೆಕಿಚ್ಚೂ ಆಗಿತ್ತು.
ರಮಾ ಮೆಲ್ಲನೆ ಹತ್ತಿರ ಬಂದು ಪಕ್ಕದಲ್ಲಿ ಮಲಗಿದ್ದಳು. ನಸುಬೆಳಕಿನಲ್ಲಿ ಅವಳ ಉಬ್ಬುತಗ್ಗುಗಳು, ಆಗಲೇ ಬರ್ನಿಯ ನೆನಪಿನ ಗುಂಗಿನಲ್ಲಿ ಹುಚ್ಚೆದಿದ್ದ ಮತ್ತೇರಿಸಿದವು. ರಮಾನ ಹತ್ತಿರಕ್ಕೆಳೆದುಕೊಂಡ. ಕ್ಷಣ ಕ್ಷಣ ಕಳೆದಂತೆ ರಮಾ ನಿಧಾನವಾಗಿ ಕರಗಿ, ಅವನ ಮನಸ್ಸಿನ ತುಂಬಾ ಬರ್ನಿ ಆವರಿಸಿದಳು.

ತನ್ನ ಆವೇಶ ಕಡಿಮೆಯಾದಂತೆ, ಇದ್ದಕ್ಕಿದ್ದಂತೆ ತಣ್ಣಗಾದ ರಾಜೀವ, ರಮಾ ಏನಂದುಕೊಂಡಳೋ? ಶ್ರೀಪಾದು ಮಾಮ ಹೋದನೆಂದು ತಿಳಿದ ದಿನ ಕೂಡ... ಆದರೆ.. ಯಾವುದೋ ಆದರ್ಶ ಹಿಡಿದು ತಿಳಿದಿದ್ದ ಶ್ರೀಪಾದ ಮಾಮ ಇಂಥಾ ಅನುಭವ ಒಂದು ಸಲವೂ ಅನುಭವಿಸದೇ ಪ್ರಾಣ ಬಿಟ್ಟಿದ್ದನೇ? ಅಥವಾ ಬೇರೆ ಯಾರೊಂದಿಗೂ ಹಮ್ಮಿಕೊಳ್ಳದಷ್ಟು ಆ ಹುಡುಗಿಯನ್ನು ಪ್ರೀತಿಸಿದ್ದನೇ? ಅದಕ್ಕೆಂಥಾ ಮನಸ್ಥೈರ್ಯ ಬೇಕು? ಮನಸ್ಥೈರ್ಯವೇನು ಮಣ್ಣು. ಅದೊಂದು ರೀತಿ ಮೂರ್ಖತನ, ಕೆಟ್ಟ ಹಟ. ತನ್ನನ್ನು ತಾನೇ ಪನಿಶ್ ಮಾಡಿಕೊಂಡು, ತಮ್ಮ ಜೀವನ ಹಾಳು ಮಾಡಿಕೊಂಡರೆ ಏನು ಬರುತ್ತೆ? ಸಾವಿನ ಸುದ್ದಿ ಕೂಡ ಬರ್ನಿಯ ಬಯಕೆಯ ಮೊನಚನ್ನು ಕಡಿಮೆ ಮಾಡಿರಲಿಲ್ಲ. ಅಂಥಾದ್ದರಲ್ಲಿ ಶ್ರೀಪಾದು ಮಾಮ.. ಎಲ್ಲೋ ಗಂಟೆ ಹೊಡೆಯಿತು. ಬೆಚ್ಚಿ ಬಿದ್ದ ರಾಜೀವ.

ಎಷ್ಟು ಹೊತ್ತಾದರೂ ನಿದ್ದೆ ಬರದು, ಹಲವಾರು ಬಾರಿ ಮಗ್ಗಲು ಬದಲಾಯಿಸಿದ. ಬಚ್ಚಲು ಮನೆಗೆ ಹೋಗಿ ಬಂದ. ನೋಡಿದರೆ ರಮಾಗೂ ನಿದ್ದೆ ಹತ್ತಿದಂತಿರಲಿಲ್ಲ. ಮೆಲ್ಲಗೆ ಕೇಳಿದ, "ನಿದ್ದೆ ಬರಲಿಲ್ಲವೆ?"
"ಇಲ್ಲ"
"ಅಲ್ಲ, ನೀವು ಕಾಗದ ಬರೆಯೋದು ಮರೆತೇಬಿಟ್ರಿ, ಬೆಳಗಾಗೆದ್ದು ಆಫೀಸ್, ಇನ್ನು ಸಾಯಂಕಾಲ ಮನೆಗೆ ಬಂದ ಮೇಲೇಂದ್ರೆ ಎಷ್ಟು ತಡ..." "ಅದೇಕೆ ಶ್ರೀಪಾದು ಮಾಮ ಸತ್ತ ವಿಷಯ ಹಾಗೆ ಪದೇ ಪದೇ ನ್ಯಾಗ್ ಮಾಡ್ತಿದೀಯಾ? ಅವನು ನಮ್ಮ ಪಾಲಿಗೆ ಸತ್ತು ಯಾವುದೋ ಕಾಲವಾಗಿತ್ತು" ಬಾಯಿಂದ ಮಾತುಗಳು ಹೊರಬಿದ್ದ ಮೇಲೆ ಸ್ವಲ್ಪ ಹೆಚ್ಚಾಯಿತೇನೋ ಅನ್ನಿಸಿತು. ರಮಾ ತೆಪ್ಪಗಾದಳು.

ರಾತ್ರಿ ಕಳೆದಂತೆ ರಾಜೀವನಿಗೆ ಇನ್ನೂ ಮುಜುಗರ. ನಿದ್ದೆ ಬರದು, ಎದ್ದು ಹೋಗಿ ಕಾಂಪೋಸ್ ಆದರೂ ತೆಗೆದುಕೊಳ್ಳಲೇ? ಬೆಳಿಗ್ಗೆ ಡಿಸೋಜಾಗೆ ರಿಪೋರ್ಟ್ ಕೊಡಬೇಕು. ಆಮೇಲೆ ಆ ಗಿರಾಕಿಯ ಸಭೆಗೆ ಹೋಗಬೇಕು. ಅವನೋ ತುಂಬಾ ಕಿರಿಕಿರಿ ಮನುಷ್ಯ ಹೇಳಿದ್ದೇ ಹೇಳಿ ಕೊರೀತಾನೆ. ಸಂಜೆ ಆ ಪಂಜಾಬಿ ಫರ್ಮಿನವರ ಜೊತೆ ಕಾಕ್ ಟೇಲ್ಸ್ , ಅದೇ ಮಬ್ಬುಗತ್ತಲೆ ಕುಡಿತ, ಅಸಭ್ಯ ಜೋಕುಗಳು, ಬಲವಂತದ ಜೋರಾದ ನಗೆ, ಆದರೆ, ಹೇಗೋ ಅವರನ್ನು ಬುಟ್ಟಿಗೆ ಹಾಕಿಕೊಂಡು ಬಿಟ್ಟರೆ ತನಗೆ ಚಾಂದಿ. ಬರ್ನಿಗೆ ತಾನು ಹೆಚ್ಚಿಗೆ ಸಲಿಗೆ ತೋರಿಸಲಿಲ್ಲಾಂತ ಕೋಪ ಬಂದಿರಬಹುದೇ? ನಾಳೆ ಒಂದಿಷ್ಟು ತಮಾಷೆಯಾಗಿ ಮಾತಾಡಿ ನೋಡಬೇಕು. ತಪ್ಪಾದರೂ ಏನಿದೆ, ಆದರೆ ಈ ಸಲಿಗೆ ಮುಂದುವರೆದರೆ... ರಮಾಗು ಎರಡು ಬಗೆದಂತೆಯೇ? ತಾನೇನೂ ಶ್ರೀಪಾದ ಮಾಮನಲ್ಲವಲ್ಲ.. ಯಾವುದೋ ಹುಡುಗಿಯ ನೆನಪಿನಲ್ಲಿ ಜೀವಮಾನವೆಲ್ಲಾ ಹಾಳು ಮಾಡಿಕೊಳ್ಳೋಕೆ... ಇದು ಕೇವಲ ಕ್ಯಾಷುಯಲ್ ಸಂಬಂಧ ಅಷ್ಟೆ. ಶ್ರೀಪಾದ ಮಾಮ ಬದುಕಿದ್ದರೆ, ತನ್ನನ್ನು ಬರ್ನಿಯ ಜೊತೆ ನೋಡಿದ್ದರೆ ಏನಂದುಕೊಳ್ಳುತ್ತಿರಬಹುದು? ಒಂದು ಕಾಂಟ್ರಾಕ್ಟ್ ಗೋಸ್ಕರ ಬಾರಿನ ಮಬ್ಬುಗತ್ತಲೆಯಲ್ಲಿ ಕೊಳೆತ ಜೋಕುಗಳನ್ನು ಕತ್ತರಿಸುತ್ತಾ ಸಂಜೆ ಮೇಲೆ ಸಂಜೆ ಕಳೆಯುವ ತನ್ನನ್ನು ಅವನು ಗುರುತಿಸುತ್ತಿದ್ದನೇ?

"ಏನೋ ಆ ಚಂಚಲ ರಾಜೂನ್ನ ಕಟ್ಟಿಕೊಂಡು ಓಡಿಹೋದಾಗ ಮದುವೇನೇ ಮಾಡಿಕೊಳ್ಳಲ್ಲ ಅಂತಿದ್ದೆ".

"ರಾಚಯ್ಯನ ಮನೆ ರಾಗಿ ರೊಟ್ಟಿ ಹೊಡೆದು ಬಂದು ಅಮ್ಮನ ಕೈಲಿ ಒದೆ ತಿಂದಿದ್ದು ಜ್ಞಾಪಕ ಇದೆಯೇನೋ".

"ನಾನು ಡಾಕ್ಟರೇ ಆಗೋದು.. ಹಳ್ಳಿಗಳಲ್ಲಿ ಸೇವೆ ಮಾಡೋದು ಅಂತಿದ್ದೆ. . ."

"ಅವತ್ತು 105 ಡಿಗ್ರಿ ಜ್ವರ ಹೋಗಿ ಎಷ್ಟು ಹೆದರಿಸಿ ಬಿಟ್ಟಿದ್ಯೋ. ರಾತ್ರಿ ಎಲ್ಲಾ ನಾನು, ನಿಮ್ಮಮ್ಮ ಕಣ್ಣಲ್ಲಿ ಎಣ್ಣೆ ಬಿಟ್ಕೊಂಡು ಒದ್ದೆ ಬಟ್ಟೆ ಹಾಕ್ತಾ ಕೂತಿದ್ವಲ್ಲೋ"

"ಮೋತಿ ಹೋದಾಗ ಮೂರು ದಿನ ಉಪವಾಸ ಮಾಡಿಬಿಟ್ಟೆಲ್ಲೋ. ಆ ನಾಯಿಮರಿ ಮೇಲೆ ಎಂಥಾ ವ್ಯಾಮೋಹ.. ಇಂಥಾ ಹೆಂಗರುಳಾದ್ರೆ ಮುಂದೆ ಕಷ್ಟ..."

"ಇದ್ರೆ ರಾಜೀವನ ಹಾಗಿರಬೇಕು.. ಒಂದು ಸಿಗರೇಟ್ ಮುಟ್ಟೊಲ್ಲ. ಒಂದು ದಿನ ಸಂಧ್ಯಾವಂದನೆ ತಪ್ಪಿಸೊಲ್ಲ..."

"ಅಂತೂ ಧೈರ್ಯಮಾಡಿ ಎಲ್ಲಾರನ್ನೂ ಎದುರು ಎತ್ತಿಹಾಕ್ಕೊಂಡೂ ಬೊಂಬಾಯಿಗೆ ಹೊರಟು ಬಿಟ್ಟೇನ್ನು.. ಶಬ್ಬಾಷ್.. ಯೋಚ್ನೆ ಮಾಡಬೇಡ. ಏನಾದ್ರೂ ತಾಪತ್ರಯ ಆದ್ರೆ ಬರಿ.. ನಾನು ದುಡ್ಡು ಗಿಡ್ಡು ಬೇಕಾದ್ರೆ ಕಳಿಸ್ತೀನಿ"

"ನೀನು ಸ್ವಲ್ಪ ಸೆಟಲ್ ಆಗ್ಬಿಡು. ಹಾಯಂತ ನಿಮ್ಮನೇಲಿ ಬಂದು ಇದ್ಬಿಡ್ತೀನಿ.."

ಊರಿಗೆ ಹೋದಾಗಲೆಲ್ಲಾ ತನ್ನ ಬಾಲ್ಯವನ್ನು ಅದರ ಮೂಲಕ ಬಾಲ್ಯದ ತನ್ನನ್ನು ಜೀವಂತವಾಗಿಸುತ್ತಿದ್ದ ಶ್ರೀಪಾದ ಮಾಮ ತನ್ನ ಪಾಲಿಗೆ ಸತ್ತು ಹೋಗಿದ್ದು ಎಂದು?

ದುಡ್ಡಿನಾಸೆಗೆ ರಮಾಳ ಕೈಹಿಡಿದ ದಿನವೇ?

ಅಮ್ಮನಿಗೆ ಸೀರಿಯಸ್ ಎಂದು ತಿಳಿದೂ 8 ಲಕ್ಷದ ಕಾಂಟ್ರಾಕ್ಟ್ ಕೈ ತಪ್ಪಿ ಹೋಗುತ್ತೇಂತ ಕೊನೇ ಗಳಿಗೇಲಿ ಅವಳ ಮುಖ ನೋಡಲು ಹೋಗದಿದ್ದಾಗಲೇ?

ತನ್ನ ಮೊದಲ ಪೆಗ್ ವಿಸ್ಕಿ ಮುಟ್ಟಿದಾಗಲೆ?

ಬರ್ನಿಯ ಮೈ ಡೊಂಕುಗಳನ್ನು ನೆನೆಯುತ್ತಾ ರಮಾಳನ್ನು ಹತ್ತಿರಕ್ಕೆಳೆದುಕೊಂಡಾಗಲೇ?

ಲಾಲವಾನೀ ತೋರಿಸಿದ ಎಂಟು ಸಾವಿರ ಸಂಬಳದ ಆಸೆಗೋಸ್ಕರ ಈ ಕಚಡಾ ಜಾಬ್ ಮಾಡಿಕೊಂಡ ದಿನವೇ?

ಕಾಂಟ್ರಾಕ್ಟ್ ಜೇಬಿಗೆ ಹಾಕಿಕೊಳ್ಳಲೋಸುಗ ಆ ಚಾವ್ಲಾಗೆ ತಾಜ್ನಲ್ಲಿ ರೂಮು ಬುಕ್ ಮಾಡಿಕೊಟ್ಟು, ತನ್ನ ಖರ್ಚಿನಲ್ಲಿ ಎಲ್ಲಾ ಏರ್ಪಾಟು ಮಾಡಿಕೊಟ್ಟಾಗಲೇ?

"ಅವನ ಕೊನೇ ಕರ್ಮ ಯಾರು ಮಾಡಿದರೋ? "ಕತ್ತಲನ್ನು ಸೀ ಳಿ ಬಂದ ರಮಾಳ ಮಾತು ಕೇ ಳಿ ಬೆಚ್ಚಿ ಬಿದ್ದ ರಾಜೀವ.

"ಯಾರದು..."

"ಮತ್ಯಾರದು... ಶ್ರೀಪಾದು ಮಾಮನದು" ವಿಚಿತ್ರವಾದ ಧ್ವನಿಯಲ್ಲಿ ಮಾತಾಡಿದಳು. ರಮಾ "ನ್ಯಾಯವಾಗಿ ನೀವೇ ಮಾಡಬೇಕಾಗಿತ್ತು. ನಿಮ್ಮನ್ನು ಮಗನಿಗಿಂತ ಹೆಚ್ಚಾಗಿ ಹಚ್ಚಿಕೊಂಡಿದ್ದಾಂತ ಹೇಳ್ತಿದ್ರಿ... ಅವನಿಗಂತೂ ಹೆಂಡತಿ ಮಕ್ಕಳಿಲ್ಲ... ಅಂದ ಮೇಲೆ..." ರಾಜೀವ ನಿರುತ್ತರನಾದ, ಶ್ರೀಪಾದು ಮಾಮನ ಕೊನೇ ಕರ್ಮ ಯಾರು ಮಾಡಿದರೋ?

ಬೆಳಿಗ್ಗೆ ಎಂಟು ಗಂಟೆಗೆ ಆಫೀಸಿಗೆ ಹೊರಡುವ ಅವಸರದಲ್ಲಿದ್ದಾಗ ಫೋನಿನ ಕರೆ. ರಾಜೀವ ಬಚ್ಚಲು ಮನೆಯಲ್ಲಿರುವುದನ್ನು ನೋಡಿ, ರಮಾನೇ ಮಾತಾಡಿದಳು. ಇವನು ಹೊರಬರುತ್ತಲೇ ಹೇಳಿದಳು.

"ಬೆಂಗಳೂರಿನಿಂದ ಫೋನ್ ಬಂದಿತ್ತು. ಶ್ರೀ ಪಾದು ಮಾಮ ಇದ್ದ ಬದ್ದ ಒಂದು ಚೂರು ಆಸ್ತಿ ಎಲ್ಲಾ ನಿಮಗೆ ಬಿಟ್ಟು ಹೋಗಿದಾನಂತೆ... ಅವೆಲ್ಲಾ ಸೆಟಲ್ ಮಾಡೊಕೆ ಆದಷ್ಟು ಬೇಗ ಬೆಂಗಳೂರಿಗೆ ಬರಬೇಕಂತೆ..."

ಅವಳಿಗೂ ಸಂತೋಷವಾದಂತಿತ್ತು. ಧ್ವನಿಯಲ್ಲಿ ಉತ್ಸುಕತೆಯಿದ್ದಂತಿತ್ತು. ದುಡ್ಡು ಯಾರಿಗೆ ಬೇಡ. "ಪಾಪ, ಎಷ್ಟು ಹಚ್ಚಿಕೊಂಡಿದ್ದ ನೋಡಿ..." ಎಂದಳು. "ಹೋಗುವ ಮುಂಚೆ ಒಂದು ಬಾರಿಯೂ ನೋಡಲಾಗಲಿಲ್ಲ" ಎಂದಳು. "ಚಿಕ್ಕೋರಿದ್ದಾಗಲೇ ತಂದೇನ ಕಳಕೊಂಡ ನಿಮಗೆ ತಂದೆಗಿಂತ ಹೆಚ್ಚಾಗಿದ್ದ. ನಾವಿಂದು ಮನುಷ್ಯರಾಗಿ ಬದುಕುತ್ತಾ ಇರೋದು ಅವನಿಂದ. ಚಿಕ್ಕೂನ ನೋಡಿದ್ರೆ ಎಷ್ಟು ಸಂತೋಷಪಡ್ತಿದ್ನೋ" ಎಂದಳು.

ರಾಜೀವನ ನೀರವತೆ ನೋಡಿ, ಅನುಮಾನಿಸುತ್ತ, "ಬೆಂಗಳೂರಿಗೆ ಯಾವಾಗ ಹೊರಡ್ತೀರಾ..." ಎಂದಳು

"ಆಂ.."

"ಬೆಂಗಳೂರಿಗೆ ಅರ್ಜೆಂಟಾಗಿ ಬರಲು ಹೇಳಿದರು..."

"ನಾನು ಬೆಂಗಳೂರಿಗೆ ಹೋಗುತ್ತಿಲ್ಲ"

"ಏನು ಶ್ರೀಪಾದು ಮಾಮ... ಅಷ್ಟೂ ಆಸ್ತೀನೂ..."

"ತಿಳೀತು"

"ಫ್ಯಾರ್ಮಾಲಿಟೀಸ್ ಎಲ್ಲಾ ಇರುತ್ತೆ. .. ಸಾವು ಬಾಳಿನ ವಿಷಯ... ತಕ್ಷಣ ಹೋಗದಿದ್ದರೆ ಚೆನ್ನಾಗಿರೊಲ್ಲ..."

"ನಾನು ಹೇಳಿದೆನಲ್ಲಾ. ನಾನು ಹೋಗುತ್ತಿಲ್ಲಾಂತ..."

"ಮತ್ತೆ ಆ ಆಸ್ತೀನೆಲ್ಲಾ ಏನು ಮಾಡ್ತಾರೆ..."

"ಅದನ್ನ ಕಟ್ಕೊಂಡು ನನಗೇನು... ಯಾವುದಾದ್ರೂ ಟ್ರಸ್ಟ್ ಗೆ ಕೊಡಬಹುದು.. ಅವರೇ ಹಂಚಿಕೊಳ್ಳಬಹುದು"

"ಅದು ಶ್ರೀಪಾದು ಮಾಮನ ನೋಯಿಸಿದ ಹಾಗಲ್ಲವೆ... ಅವರ ಕೊನೇ ಗಳಿಗೆಯ ಆಸೆ ಪೂರೈಸದೆ... ನನಗೇನೂ ಅರ್ಥ ಆಗ್ತಾ ಇಲ್ಲ..."

"ನಿಂಗೆ ಆಗೋದೂ ಇಲ್ಲ... ಅವನು ಆಸ್ತಿ ಬಿಟ್ಟಿದ್ದು ನನಗಲ್ಲ..." ಮಂಪರಿನಲ್ಲಿರುವವನಂತೆ ಮಾತಾಡಿದ ರಾಜೀವ.

"ಅಯ್ಯೋ ಅವರು ಫೋನ್ ನಲ್ಲಿ ಕ್ಲಿಯರ್ ಆಗಿ ಹೇಳಿದರು ಇದೇನೂ ತಮಾಷೆ ವಿಷಯವಲ್ಲವಲ್ಲ... ನೀವು ಸರಿಯಾಗಿದೀರಾ ತಾನೇ?'

"ಅವರು ಹೇಳಿದ್ದು ಸರೀಂತ ನನಗೂ ಗೊತ್ತು.. ಆದರೆ ಹೇಳಿದೆನಲ್ಲಾ... ಶ್ರೀಪಾದು ಮಾಮ ಆಸ್ತಿ ಬಿಟ್ಟಿದ್ದು ನನಗಲ್ಲ..." ಎಂದು ಗೊಣಗುತ್ತಾ ಆಫೀಸ್ ಬಸ್ ಹಿಡಿಯಲು ನಿಧಾನವಾಗಿ ಮನೆಯಿಂದ ಹೊರಗೆ ಹೆಜ್ಜೆ ಹಾಕಿದ ರಾಜೀವ.

# ಮುಂಬಯಿ ಕನ್ನಡ ರಂಗಭೂಮಿಯ ಉಳಿವು-ಬೆಳೆವು

**- ನೇಸರು ವರದಿ**

ಇದೇ ಆಗಸ್ಟ್ 14, 2022 ಭಾನುವಾರ ಬೆಳಿಗ್ಗೆ 10.30 ಕ್ಕೆ ಮುಂಬಯಿ ಕನ್ನಡ ರಂಗಭೂಮಿಯ ಮೆರಗನ್ನು ಮತ್ತೆ ಎತ್ತಿ ಹಿಡಿಯಬೇಕೆಂದು, ಅದಕ್ಕಾಗಿ ಯೋಜನೆಯೊಂದನ್ನು ಅಣಿ ಮಾಡಬೇಕೆಂದು, ಮೈಸೂರು ಅಸೋಸಿಯೇಷನ್ ನಲ್ಲಿ ಸೇರಿ ಚರ್ಚೆ ನಡೆಸಿದ್ದರು.

ಸಭೆಯಲ್ಲಿ ಸೇರಿದ ಮಾನ್ಯ ಕಲಾವಿದರು:

| | | |
|---|---|---|
| ಡಾ. ಮಂಜುನಾಥ್ | ಡಾ. ಉಷಾ ದೇಸಾಯಿ | ಶ್ರೀ ಓಂದಾಸ್ ಕಣ್ಣಂಗಾರ್ |
| ಶ್ರೀ ಮಧುಸೂದನ್ T.R. | ಶ್ರೀ ಸುರೇಂದ್ರಕುಮಾರ್ ಮಾರ್ನಾಡ್ | ಶ್ರೀ ಅವಿನಾಶ್ ಕಾಮತ್ |
| ಶ್ರೀ ಸಿ. ಎಸ್. ದಿನೇಶ್ | ಶ್ರೀಮತಿ ಲಕ್ಷ್ಮೀ ಸೀತಾರಾಂ | ಶ್ರೀ ಕೆ. ಮಂಜುನಾಥಯ್ಯ |
| ಶ್ರೀ ಕಮಲಾಕ್ಷ ಸರಾಫ್ | ಡಾ. ಗಣಪತಿ ಶಂಕರಲಿಂಗ್ | ಶ್ರೀ ಶಶಿಕಾಂತ ಜೋಶಿ |
| ಶ್ರೀಮತಿ ಭವಾನಿ ಭಾರ್ಗವ್ | ಶ್ರೀ ಪಾರ್ಥಸಾರಥಿ ನಾಯಕ್ | ಶ್ರೀಮತಿ ವೀಣಾ ಜೋಶಿ |
| ಶ್ರೀ ಭರತ್ ಕುಮಾರ್ ಪೊಲಿಪು | ಶ್ರೀ ಅಶೋಕ್ ಸುವರ್ಣ | ಶ್ರೀಮತಿ ಲತಾ ಉಪಾಧ್ಯಾಯ |
| ಶ್ರೀ ಸುರೇಶ್ ಖಾಸ್ನಿಸ್ | ಶ್ರೀ ಸುದೀಪ್ ರೇಗೆ | ಶ್ರೀ ರಾಘವೇಂದ್ರ ಉಪಾಧ್ಯಾಯ |
| ಶ್ರೀ ಜಯಶೀಲ ಸುವರ್ಣ | ಶ್ರೀ ಸುಂದರ್ ಕೇಲ್ಕರ್ | ಶ್ರೀ ರಾಘವ್ ಬೆಳ್ಳೂರು |

ಮೊದಲಿಗೆ ಡಾ. ಮಂಜುನಾಥ್ ಅವರು ಹಿಂದೆ ಈ ರಂಗಭೂಮಿಗಾಗಿ ದುಡಿದ ಅನೇಕ ನಿರ್ದೇಶಕರು, ಕಳೆದ 150 ವರ್ಷಗಳಲ್ಲಿ ಈ ಹೊರನಾಡಿನಲ್ಲಿ ಕನ್ನಡದ ಹೆಗ್ಗಳಿಕೆಯನ್ನು ಎತ್ತಿ ಹಿಡಿದ್ದನ್ನು ನೆನೆದರು. ಆದರೆ ಇಂದು ಆ ಮೆರಗು ತುಸು ಕಡಿಮೆಯಾಗಿದ್ದು, ಅದರ ಬಗ್ಗೆ ನಾವು ಮತ್ತೆ ಒಂದು ಯೋಜನೆಯನ್ನು ಹಾಕಬೇಕೆಂದರು.

ಡಾ. ಭರತ್ ಕುಮಾರ್ ಪೊಲಿಪು ವಿಶದವಾಗಿ ಇದರ ಬಗ್ಗೆ ತಿಳಿ ಹೇಳಿದರು. ಒಂದು ನಾಟಕವನ್ನು ಅಣಿ ಮಾಡಲು ಕಡಿಮೆ ಎಂದರೆ ಒಂದೂವರೆ ಲಕ್ಷ ರೂಪಾಯಿ ಬೇಕಾಗುತ್ತದೆ. ಇದರಲ್ಲಿ ರಿಹರ್ಸಲ್ ಖರ್ಚು, ಮೇಕಪ್, ರಂಗಸಜ್ಜಿಕೆ, ಸಂಗೀತ ಎಲ್ಲವೂ ಸೇರುತ್ತವೆ. ಇಂದು ಅದನ್ನು ಹೊರುವ ಸಂಸ್ಥೆಗಳು ಕಡಿಮೆಯಾಗಿವೆ ಎಂದರು.

ಶ್ರೀ ಮಧುಸೂದನ್ ಅವರು ಮಾತನಾಡಿ ಕನ್ನಡ ಕಲಾಕೇಂದ್ರದ ಕೊಡುಗೆಯನ್ನು ನೆನೆಯುತ್ತಾ, ಕೇಂದ್ರ ಇಂದೂ ಆ ಕೆಲಸವನ್ನು ಮಾಡುತ್ತಾ ಬಂದಿದೆ. ಇದೇ ತಿಂಗಳಲ್ಲಿ 21 ನೆಯ ತಾರೀಖು ಮೂರು ನಾಟಕಗಳ ಒಂದು ಉತ್ಸವವನ್ನು ಕೇಂದ್ರ ಜರುಗಿಸುತ್ತಿದೆ ಎಂದು ಎಲ್ಲರ ಸಹಕಾರವನ್ನು ಕೋರಿದರು.

ಶ್ರೀ ಅಶೋಕ ಸುವರ್ಣ ರವರು ಮಾತನಾಡುತ್ತಾ, ಈಗ ಕನ್ನಡ ಜನ ಚದುರಿ ಹೋಗಿರುವುದರಿಂದ ಕೇವಲ ಕೆಲವೇ ಸಂಸ್ಥೆಗಳನ್ನು ಗುರುತಿಸುವ ಬದಲು ಅವುಗಳ ಬ್ರಾಂಚ್ ಗಳನ್ನು ಸಂಪರ್ಕಿಸುವುದು ಉಚಿತ ಎಂದರು. ಮೊಗವೀರ ಸಂಸ್ಥೆ ಈಗ ಅನೇಕ ಬ್ರಾಂಚ್ ಗಳನ್ನು ಉಪನಗರಗಳಲಿ ಹೊಂದಿದ್ದು, ಅಲ್ಲಿ ನಾಟಕಗಳನ್ನು ನೋಡುವ ಮಂದಿ ಇದ್ದಾರೆ ಎಂದರು. ಇಂತೆಯೇ ಬಂಟರ ಹಾಗೂ ಬಿಲ್ಲವರ ಸಂಘಗಳು ಇವೆ ಎಂದರು. ನೀವುಗಳು ಅವರೆಲ್ಲರನ್ನೂ ಸಂಪರ್ಕಿಸಿ ಒಂದು ನೋಡುಗರ ನೆರೆಯನ್ನು ಕಟ್ಟಬೇಕು ಎಂದರು.

ಶ್ರೀ ದಿನೇಶ್ ಅವರು ಮಾತನಾಡುತ್ತಾ ನಟರನ್ನು ತಯಾರು ಮಾಡಲು ಹೆಚ್ಚಿನ ಕಮ್ಮಟಗಳನ್ನು ಜರುಗಿಸಬೇಕು ಎಂದರು. ಡಾ. ಶಂಕರಲಿಂಗ ಅವರು  ಮಾತನಾಡುತ್ತಾ ನಾವು ಕಲಾವಿದರು ಹಾಗೂ ನಿರ್ದೇಶಕರನ್ನು ರಂಗಾಯಣ, ನೀನಾಸಂ ಅಂತಹ ರಂಗಶಾಲೆಗಳಿಗೆ ಕಳಿಸಬೇಕೆಂದರು.

ಶ್ರಿ ಮಂಜುನಾಥಯ್ಯನವರು ಇಂದು ಕೇವಲ ನಟನೆ, ರಂಗಭೂಮಿ ಸಿನೆಮಾ ಇವುಗಳನ್ನೇ ತಮ್ಮ ಕಸುಬಾಗಿಟ್ಟುಕೊಳ್ಳುವರು ಮಾತ್ರ ಇಂತಹ ರಂಗಶಾಲೆಗಳಿಗೆ ಹೋಗಿ ಸಾಕಷ್ಟು ತಿಂಗಳುಗಳ ಕಾಲ ಇರುತ್ತಾರೆ. ಹವ್ಯಾಸಿ ರಂಗಭೂಮಿಯವರು ತಮ್ಮ ಕಸುಬನ್ನು ಬಿಟ್ಟು ಅಲ್ಲಿಗೆ ಹೋಗಲು ಬಯಸುವುದಿಲ್ಲ. ಅಂತಹ ಕೆಲಸವನ್ನು

ನಾವೇ ಇಲ್ಲಿ ಮುಂಬಯಿಯಲ್ಲಿ ಮಾಡಬೇಕು. ಭಾಷೆ ಒಂದು ಬೇರೆಯಾಗಿದೆ ಹೊರತು ರಂಗಭೂಮಿಗೆ ಮೂಲವಾದ ಇನ್ನೆಲ್ಲ ತಯಾರಿಗಳು ಇಲ್ಲಿಯೇ ಮುಂಬಯಿಯಲ್ಲಿಯೇ ಬೇರೆ ಭಾಷಿಗರಿಂದ ದೊರೆಯುತ್ತದೆ. ಮರಾಠಿ, ಹಿಂದಿ, ಇಂಗ್ಲೀಷ್ ರಂಗಭೂಮಿಯ ಕಲಾವಿದರನ್ನು ಕರೆಸಿ ನಾವು ಕಲಾವಿದರನ್ನು ನಟನೆ, ಬೆಳಕು, ರಂಗಸಜ್ಜಿಕೆಗಳಲ್ಲಿ ತಯಾರು ಮಾಡಬಹುದು ಎಂದರು.

ಶ್ರೀ ಅವಿನಾಶ್ ಕಾಮತರು ಕಲಾವಿದರನ್ನು ತಯಾರು ಮಾಡಬಹುದು, ಆದರೆ ಈಗ ಕನ್ನಡ ರಂಗಭೂಮಿಯಲ್ಲಿ ನಿಜವಾದ ಕೊರತೆ ಇರುವುದು ನಿರ್ದೇಶಕರು. ನಿರ್ದೇಶನದಲ್ಲಿ ನಿಜವಾಗಿ ಬೇಕಾದದ್ದು, ಒಬ್ಬ ಚಿತ್ರಕಾರನ ಮನೋಚಿಂತನೆ. ಅಂತಹವರು ಈಗ ನಮ್ಮಲ್ಲಿ ಕಡಿಮೆಯಾಗಿದ್ದಾರೆ ಎಂದರು.

ಶ್ರೀ ಕಮಲಾಕ್ಷ ಸರಾಫರು, ಹೌದು ಅನೇಕ ಕಡಿಮೆಗಳು ನಮ್ಮಲ್ಲಿದೆ. ಆದರೆ ನಾವೆಲ್ಲರೂ ಇದರಲ್ಲಿ ಕೈಗೂಡಿಸಿ ಜನರನ್ನು ಕೂಡಿಸಿದಾಗ ಜನರನ್ನು ಕೂಡಿಸಿದಾಗ, ಹಲವು ಉತ್ತರಗಳು ತಾವಾಗಿಯೇ ದೊರೆಯುತ್ತವೆ ಎಂದರು.

ಶ್ರೀ ರಾಘವ್ ಅವರು, ನಮ್ಮ ರಂಗಭೂಮಿಯಲ್ಲಿ ಈಗ ಮಡಿವಂತಿಕೆ ಹೆಚ್ಚಾಗಿದೆ. ಇಂತಹದೇ ನಾಟಕಗಳನ್ನು ಮಾಡಬೇಕು ಎಂದು ನೀತಿವಂತರಾಗುವುದನ್ನು ಬಿಟ್ಟು, ಈಗಿನ ನೋಡುಗರ ಮನಸ್ಸಿಗೆ ಮುಟ್ಟುವಂತಹ ನಾಟಕಗಳನ್ನು ಮಾಡಬೇಕು ಎಂದರು.

ಶ್ರೀ ಓಂದಾಸ್ ಕಣ್ಣಂಗಾರ್ ಅವರು, ಕನ್ನಡ ದಲ್ಲಿ ಹಲವಾರು ತಂಡಗಳೂ ಈಗಲೂ ರಂಗಭೂಮಿಯಲ್ಲಿ ನಿರಂತರವಾಗಿ ಮುಂಬಯಿಯಲ್ಲಿ ಅನೇಕ ಎಡೆಗಳಲ್ಲಿ ನಾಟಕಗಳನ್ನು ಆಡುತ್ತಿವೆ. ನಾವು ಅವರನ್ನೂ ಇದರಲ್ಲಿ ಕೂಡಿಸಬೇಕು ಎಂದರು.

ಶ್ರೀ ಪಾರ್ಥಸಾರಥಿ ನಾಯಕ್ ಅವರು, ಕನ್ನಡದವರು ಹಲವಾರು ಕೆಲಸಗಳನ್ನು ಬಹಳ ನಿಷ್ಠೆಯಿಂದ ಹಲವು ದಶಕಗಳಿಂದ ಮಾಡುತ್ತಾ ಬಂದಿದ್ದಾರೆ. ಆದರೆ ಅದನ್ನು ಒಂದು ಬ್ರಾಂಡ್ ಮಾಡಿಲ್ಲ. ಒಂದು ರಂಗ ಪ್ರದರ್ಶನವಾದರೆ ಸಾಲದು, ಅದಕ್ಕೆ ಪ್ರಚಾರವಾಗಿ ಹಲವಾರು ಕಡೆ ಹಾಕಬೇಕು ಪತ್ರಿಕೆಗಳಲ್ಲಿ ಪ್ರಚಾರವಾಗಬೇಕು ಎಂದರು.

ಡಾ. ಉಷಾ ದೇಸಾಯಿಯವರು ತಾವೀಗ ಶ್ರೀರಂಗರ ನೆನಪಿನಲ್ಲಿ ಪ್ರತೀ ವರ್ಷ ಒಂದು ರಂಗೋತ್ಸವ ಜರುಗಿಸುತ್ತಾ ಇದ್ದೀರಿ. ಈ ರಂಗ ಬೆಳವಣಿಗೆಯ ಕಾರ್ಯದಲ್ಲಿ ತಮ್ಮ ಪೂರ್ಣ ಸಹಕಾರ ಇದೆ. ಆದರೆ ಹಿಂದಿನಂತೆ ಈಗ ಮೂರು ಗಂಟೆಗಳ ಕಾಲ ಯಾರೂ ನಾಟಕಗಳನ್ನು ನೋಡಲು ಸಿದ್ಧವಿಲ್ಲ. ಆದ್ದರಿಂದ 1 ಅಥವಾ1½ ಗಂಟೆಗಳ ನಾಟಕಗಳನ್ನು ಸಿದ್ಧ ಪಡಿಸಬೇಕು, ಹಾಗೂ ಅವು ಕೇವಲ ಒಂದೇ ಎಡೆಯಲ್ಲಿ ಆಗದೆ, ಮಹಾ ಮುಂಬೈ, ನವಿ ಮುಂಬೈಯಲ್ಲಿ ಜರುಗಬೇಕು ಎಂದರು.

ಬಹಳಷ್ಟು ಆಳವಾದ ಚರ್ಚೆಯ ನಂತರ ಒಂದು ಚಿಕ್ಕ ಕೂಟವನ್ನು ಕೂಡಿಸಿ, ಇಲ್ಲಿ ಬಂದ ಸಲಹೆಯನ್ನು ಪರಿಗಣಿಸಿ ಒಂದು ಬಲವಾದ ಯೋಜನೆಯೊಂದನ್ನು ಮತ್ತೆ ಈ ಸಭೆಯ ಮುಂದಿಡಬೇಕೆಂಬ ನಿರ್ಧಾರವನ್ನು ಸಭೆ ತೆಗೆದುಕೊಂಡಿತು. ಈ ಚಿಕ್ಕ ಕೂಟದ ಮುಂದಾಳುತನವನ್ನು ಶ್ರೀ ಮಧುಸೂದನ್ ಅವರಿಗೆ ಒಪ್ಪಿಸಲಾಯಿತು. ಅವರ ಜೊತೆಗೆ ಡಾ. ಪೊಲಿಪು ಮತ್ತು ಅಶೋಕ ಸುವರ್ಣ ಅವರನ್ನೂ ಸೇರಿಸಿ ಈ ಕೂಟ ಮತ್ತೆ ಬೇಕಾದವರನ್ನು ಜೊತೆಗೂಡಿಸಿಕೊಂಡು ಬಲವಾದ ಸಂಸ್ಥೆಗಳ ಪ್ರತಿನಿಧಿಗಳನ್ನೂ ಸೇರಿಸಿಕೊಂಡು, ಯೋಜನೆಯೊಂದನ್ನು ತಯಾರು ಮಾಡಿ ಮುಂದಿನ ಸಭೆಯ ಮುಂದೆ ಇಡಬೇಕೆಂದು ನಿರ್ಧಾರವಾಯಿತು.

# ಸಂಭ್ರಮದಲ್ಲಿ ನಡೆದ ಕನ್ನಡ ಕಲಾ ಕೇಂದ್ರ ಮುಂಬಯಿಯ 63ನೇ ನಾಟಕೋತ್ಸವ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭ

ಕನ್ನಡ ಕಲಾ ಕೇಂದ್ರಕ್ಕೆ ಆಗಸ್ಟ 21, 2022, ಒಂದು ಅವಿಸ್ಮರಣೀಯ ದಿನ ಎಂದರೂ ತಪ್ಪಾಗಲಾರದು. ನಾಟಕಗಳಿಗೆಂದೇ ಸ್ಥಾಪಿಸಲ್ಪಟ್ಟ ಸಂಸ್ಥೆ ಆಗಿದ್ದರೂ ಕಲೆಯ ವಿವಿಧ ಆಯಾಮಗಳಿಗೂ ಕ್ರಮೇಣ ಪ್ರೋತ್ಸಾಹ ನೀಡುವುದನ್ನು ಕಲಾ ಕೇಂದ್ರ ಪದ್ಧತಿಯಂತೆ ರೂಡಿಸಿಕೊಂಡು ಬರುತ್ತಿದೆ. ಅಂದು ಮಾಟುಂಗದ ಮೈಸೂರು ಅಸೋಸಿಯೇಷನ್ ನ ಸಭಾಗೃದಲ್ಲಿ ಮುಂಬಯಿಗರಿಂದಲೇ ಪ್ರದರ್ಶಿಸಲ್ಪಟ್ಟ ಎರಡು ನಾಟಕ, ಒಂದು ರಂಗ ರೂಪಕ, ಮತ್ತೊಂದು ತಾಳಮದ್ದಳಯೇ ಮೇಲಿನ ಮಾತಿಗೆ ಸಾಕ್ಷಿ ಎನ್ನಬಹುದು.



ಬೆಳಗಿನ ಉದ್ಘಾಟನಾ ಸಮಾರಂಭದ ಬಳಿಕ 11:30 ಸುಮಾರಿಗೆ ಮೊದಲ ನಾಟಕವಾಗಿ ರಂಗಭೂಮಿ ಫೈನ್ ಆರ್ಟ್ಸ್ ನವರು 'ಸಂಸಾರ' ಎಂಬ ನಾಟಕವನ್ನು ಪ್ರದರ್ಶಿಸಿ ಪ್ರೇಕ್ಷಕರ ಮನ ಗೆದ್ದರು. ಈ ನಾಟಕವನ್ನು ಶ್ರೀ ನಂದಳಿಕೆ ನಾರಾಯಣ ಶೆಟ್ಟಿಯವರು ರಚಿಸಿ ಶ್ರೀ ಅದ್ಯಪಾಡಿ ಬಾಲಕೃಷ್ಣ ಶೆಟ್ಟಿ ನಟಿಸಿ ನಿರ್ದೇಶಿಸಿದ್ದರು.



ನಾಟಕದ ಇತರ ಕಲಾವಿದರಾಗಿ ಶ್ರೀ ವಿ ಕೆ ಸುವರ್ಣ, ಶ್ರೀ ಮತಿ ಪ್ರಿಯಾ ಸರೋಜಾ ದೇವಿ, ಶೈಲೇಶ ಪುತ್ರನ್, ಸುಜಿತ್ ಪೂಜಾರಿ ನಟಿಸಿದ್ದರು. ವರ್ಣಾಲಂಕಾರವನ್ನು ಮಂಜುನಾಥ್ ಶೆಟ್ಟಿಗಾರ್, ರಂಗಾಲಂಕಾರವನ್ನು ಹಿತೇಶ್ ರವಿಶಂಕರ್ ಆಚಾರ್ಯ, ದೀಪಾಲಂಕಾರವನ್ನು ಮನೋಹರ್ ಶೆಟ್ಟಿ ನಂದಳಿಕೆ ಸಂಗೀತವನ್ನು ರಾಜೇಶ್ ಹೆಗ್ಡೆ, ಸಹಕರಿಸಿದರೆ ಹಿನ್ನೆಲೆ ಸಹಕಾರವನ್ನು ಜಗದೀಶ್ ಶೆಟ್ಟಿ ಪನ್ವೇಲ್ ನೀಡಿದ್ದರು.

ಮಧ್ಯಾಹ್ನ 1 ಗಂಟೆಗೆ 'ಅತಿ ಕಾಯಮೋಕ್ಷ' ಯಕ್ಷಗಾನ ತಾಳಮದ್ದಳೆಯನ್ನು ಬಿ ಎಸ್ ಕೆ ಬಿ ಅಸೋಸಿಯೇಷನ್ ನ ಗೋಕುಲ ಕಲಾವೃಂದದವರು ಬಹಳ ಚೆನ್ನಾಗಿ ನಡೆಸಿಕೊಟ್ಟರು. ಇದರಲ್ಲಿ ಭಾಗವತರಾಗಿ ಶ್ರೀ ಜಯಪ್ರಕಾಶ್ ನಿಡ್ವಣ್ಣಾಯ, ಮದ್ದಳೆಯಲ್ಲಿ ಶ್ರೀ ಹರೀಶ್ ಸಾಲಿಯಾನ್, ಚಂಡೆಯಲ್ಲಿ ಶ್ರೀ ಪ್ರವೀಣ್ ಶೆಟ್ಟಿ, ಅರ್ಥದಾರಿಗಳಾಗಿ ಶ್ರೀ ಮತಿ ಗೀತಾ ಎಲ್ ಭಟ್ (ಅತಿಕಾಯ), ಶ್ರೀ ಮತಿ ಶಾಂತಲಕ್ಷ್ಮಿ ಉಡುಪ (ರಾವಣ), ಶ್ರೀ ಮತಿ ಶೈಲಿನಿ ರಾವ್ (ಶ್ರೀರಾಮ), ಶ್ರೀಮತಿ ಚಂದ್ರಾವತಿ ರಾವ್ (ಲಕ್ಷ್ಮಣ) ಮತ್ತು ಕುಮಾರಿ ಸುಪ್ರಿಯಾ ಉಡುಪ (ವಿಭೀಷಣ) ಭಾಗವಹಿಸಿದ್ದರು.

ಭೋಜನ ವಿರಾಮದ ಬಳಿಕ ಮಧ್ಯಾಹ್ನ 2:30 ಹೊತ್ತಿಗೆ ನವೋದಯ ಕಲಾರಂಗದ ಐತಿಹಾಸಿಕ ತುಳು ನಾಟಕ "ಸತ್ಯ ಒರಿಪಾವ" ಪ್ರದರ್ಶಿಸಲ್ಪಟ್ಟಿತು. ಈ ನಾಟಕವನ್ನು ಇತ್ತೀಚೆಗಷ್ಟೇ ನಮ್ಮನ್ನಗಲಿದ ಶ್ರೀ ಶ್ರೀನಾಥ್ ಮುಲ್ಕಿ ಅವರು ರಚಿಸಿದ್ದರು. ಚಲನಚಿತ್ರ ನಟ ಶ್ರೀ ಚಂದ್ರಕಾಂತ್ ಸಾಲಿಯಾನ್ ಸಸಿ ಹಿತ್ತಲು ಅವರು ನಿರ್ದೇಶನ ಮಾಡಿದ್ದರು ಕೋಟಿ ಚೆನ್ನಯರ ಕಥಾ ವಸ್ತುವನ್ನು ಹೊಂದಿದ ಈ ನಾಟಕದಲ್ಲಿ ಬಲ್ಲಾಳನಾಗಿ ಶ್ರೀ ಕರುಣಾಕರ ಶೆಟ್ಟಿ ಹೆಬ್ರಿ, ಕೋಟಿಯಾಗಿ ಚಿತ್ರನಟ ಶ್ರೀ ಅಶೋಕ್ ಕುಮಾರ್ ಕಾರ್ನಾಡ್, ಚೆನ್ನಯ್ಯನಾಗಿ ಚಿತ್ರನಟ ಶ್ರೀ ಚಂದ್ರಕಾಂತ್ ಸಾಲಿಯಾನ್, ಬುದ್ಯಂತನಾಗಿ ಶ್ರೀ ನವೀನ್ ಶೆಟ್ಟಿ ಇನ್ನ ಬಾಳಿಕೆ, ಬೋಡಿ ಬೊಮ್ಮಯ್ಯನಾಗಿ ಶ್ರೀ ಕೇಶವ ಶೆಟ್ಟಿ, ಸಾಯನಬೈದೆನಾಗಿ ಶ್ರೀ ಸಚಿನ್ ಪೂಜಾರಿ, ಭಿವಂಡಿ, ದೇವಿ ಬೈದೆದಿಯಾಗಿ ಶ್ರೀಮತಿ ಭಾರತಿ ಅಂಚನ್, ಪಟ್ಟದಬೈಯಾಗಿ ಶ್ರೀಮತಿ ದೀಕ್ಷಾ ದೇವಾಡಿಗ ಸೇವಕನಾಗಿ ಶ್ರೀ ಸುರೇಶ್ ಇರುವತ್ತೂರು ಅಭಿನಯಿಸಿದ್ದರು. ಶ್ರೀ ದಿವಾಕರ್ ಕಟೀಲ್ ಸಂಗೀತ ನೀಡಿದ್ದರೆ, ಶ್ರೀ ಮಂಜುನಾಥ್ ಶೆಟ್ಟಿಗಾರ್ ಮೇಕಪ್ ಮ್ಯಾನ್ ಆಗಿದ್ದರು. ಗೀತೆಗಳನ್ನು ಶ್ರೀ ನಾರಾಯಣಶೆಟ್ಟಿ ನಂದಳಿಕೆ ರಚಿಸಿ ಚಲನಚಿತ್ರ ನಟ ಶ್ರೀ ಮನೋಹರ ನಂದಳಿಕೆ ದೀಪ ಸಂಯೋಜನೆ ಮತ್ತು ಸಂಪೂರ್ಣ ಸಹಕಾರ ನೀಡಿದ್ದರು.

ಸಂಜೆ ಸುಮಾರು ನಾಲ್ಕು ಗಂಟೆಯ ಹೊತ್ತಿಗೆ ಕನ್ನಡ ಕಲಾ ಕೇಂದ್ರದ ಪ್ರಸ್ತುತಿಯಲ್ಲಿ 'ಅಂಬಿಕಾತನಯದತ್ತ ರಂಗ ರೂಪಕ' ಪ್ರದರ್ಶಿತಗೊಂಡಿತು. ದ ರಾ ಬೇಂದ್ರೆಯವರ ಕವನಗಳನ್ನು ಆಧರಿಸಿದ ಈ ಗೀತ ರೂಪಕ ಬಹಳ ವಿಶಿಷ್ಟವಾದ ಪ್ರಯತ್ನ ಎನಿಸಿತು. ಆಯ್ದುಕೊಂಡ ಗೀತೆಗಳು ಗಾಯನ ಅಭಿನಯ ಮನ ಮುಟ್ಟುವಂತಿದ್ದವು. ರಂಗದಲ್ಲಿ ಶ್ರೀ ಮೋಹನೀಶ್ ಸಾಲಿಯಾನ್, ಶ್ರೀ ಸನಾತನ್ ತಾಮನ್ಕರ್, ಸಾತ್ವಿಕ್ ಜೆ ರೈ ಸನ್ ವಿತ್ ಜೆ ರೈ ಸುನಿಧಿ ಎಸ್ ಶೆಟ್ಟಿ, ನೇಹ ನಾಯಕ್ ನಳಿನ ಪ್ರಸಾದ್ ಗಣೇಶ್ ಕುಮಾರ್ ಸಹನಾ ಭಾರದ್ವಾಜ್ ಸುಚೇತ ಎಸ್ ಶೆಟ್ಟಿ ಮಧುಸೂದನ್ ಟಿ ಆರ್ ಬಬಿತಾ ಜೆ ರೈ ಜಗದೀಶ್ ರೈ ಭೀಮರಾಯ ಚಿಲ್ಕ ಸಹಕರಿಸಿದರೆ

ತೆರೆಯ ಮರೆಯಲ್ಲಿ ಹೇಮರಾಯ ಚಿಲ್ಕ ಸುಚೇತ ಶೆಟ್ಟಿ, ಕ್ಷಮಾ ತಾಮನ್ಕರ್, ಅದ್ವಿಕ ಶ್ರೇಯಾಸಾಗರ್, ಅನುಶಾ ನಾಯಕ್ ಸಹಕರಿಸಿದರು.

ಪ್ರಸಾಧನದಲ್ಲಿ ಶ್ರೀ ಮಂಜುನಾಥ್ ಶೆಟ್ಟಿಗಾರ್, ಬೆಳಕು ವ್ಯವಸ್ಥೆಯಲ್ಲಿ ಶ್ರೀ ವೆಂಕಟ್, ರಂಗ ನಿರ್ವಹಣೆಯಲ್ಲಿ ಶ್ರೀ ಮಧುಸೂದನ ಟಿ ಆರ್, ಶ್ರೀ ಜಗದೀಶ್ ರೈ ಸಹಕರಿಸಿದರು. ಸಂಗೀತವನ್ನು ಶ್ರೀ ವಾಸು ಜೆ ಮೊಯ್ಲಿ ಸಂಯೋಜಿಸಿದ್ದರು. ಹಾರ್ಮೋನಿಯಂನಲ್ಲಿ ಶ್ರೀ ಪ್ರಫುಲ್ ಶ್ರೀಯಾನ್, ತಬಲಾದಲ್ಲಿ ಶ್ರೀ ನವನೀತ್ರ ರಾವ್, ಶ್ರೀ ರಾಘವೇಂದ್ರು ಸಾಲಿಯಾನ್ ಸಾತ್ ನೀಡಿದರು. ಗಾಯನ ವಾಚನವನ್ನು ಶ್ರೀ ವಾಸು ಮೊಯ್ಲಿ, ಶ್ರೀ ಗೋಪಾಲ ತ್ರಾಸಿ, ಶ್ರೀ ಮಧುಸೂದನ ಟಿ ಆರ್, ಕುಮಾರಿ ಸಾನ್ವಿ ಜೆ ರೈ, ಶ್ರೀ ಗಣೇಶ್ ಕುಮಾರ್, ಶ್ರೀ ಜಗದೀಶ್ ಬಿ ರೈ, ಶ್ರೀ ಸಾದಯ ನಿರ್ವಹಿಸಿದರು. ರಂಗ ವಿನ್ಯಾಸವನ್ನು ಶ್ರೀ ಗಣೇಶ್ ಕುಮಾರ್ ಮಾಡಿದ್ದರು. ಡಾಕ್ಟರ್ ವರದರಾಜ ಚಂದ್ರಗಿರಿ ಮತ್ತು ಶ್ರೀ ಸಾ ದಯಾ ರಚನೆಯ ರೂಪಕ ವನ್ನು ಶ್ರೀ ಸಾ ದಯ ನಿರ್ದೇಶಿಸಿದ್ದರು. ಸಂಜೆ 5:30ರ ಬಳಿಕ ಉಪಶಾಸ್ತ್ರೀಯ ಹಿಂದುಸ್ತಾನಿ ಸಂಗೀತದ ನೇತೃತ್ವವನ್ನು ವಹಿಸಿದ್ದ ಶ್ರೀ ನವನೀತ ರಾವ್ ತಬಲ ಬಾರಿಸಿದರೆ, ಸಂಗೀತದಲ್ಲಿ ಶ್ರೀ ಅನ್ವೇಷ ಹಲ್ದರ್ ಕೀಬೋರ್ಡ್ ನಲ್ಲಿ ಶ್ರೀ ವಿನೋದ್, ಹಾರ್ಮೋನಿಯಂನಲ್ಲಿ ಶ್ರೀ ಗೋಪಾಲ ಪ್ರಭು ಸಹಕರಿಸಿದರು. ಈ ತಂಡದ ಸಂಗೀತ ಕಚೇರಿ ಸುಶ್ರಾವ್ಯವಾಗಿತ್ತು. ನೆರೆದಿದ್ದ ಸಂಗೀತಪ್ರಿಯರು ಈ ತಂಡ ಪ್ರಸ್ತುತಪಡಿಸಿದ ಭೀಮ್ ಫಲಾಸಿ, ಅಭಂಗ ಮತ್ತು ಕಬೀರ್ ದೋಹಗಳನ್ನು ಮೆಚ್ಚಿಕೊಂಡರು. ಸಮಾರೋಪ ಸಮಾರಂಭದಲ್ಲಿ ವಿವಿಧ ರಂಗ ಕಲೆಗಳಲ್ಲಿ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಿ ಸನ್ಮಾನಿಸಬೇಕೆಂಬ ಕನ್ನಡ ಕಲಾ ಕೇಂದ್ರದ ಆಶಯದಂತೆ ಹಿರಿಯರಂಗ ನಟ ನಿರ್ದೇಶಕ ನಾಟಕ ಕಥೆ ಕಾದಂಬರಿಕಾರ ಶ್ರೀ ಸದಾನಂದ ಸುವರ್ಣರ ಹೆಸರಿನಲ್ಲಿ ಕನ್ನಡ ನಾಟಕ ರಂಗದ ಸಾಧಕರಿಗೆ ನೀಡಲಾಗುವ 'ಸುವರ್ಣ ಶ್ರೀ' ಪ್ರಶಸ್ತಿಯನ್ನು ನಗರದ ಹಿರಿಯ ರಂಗನಟ ಶ್ರೀ ಉಮೇಶ್ ಎನ್ ಶೆಟ್ಟಿ ಅವರಿಗೂ, ಕನ್ನಡ ಕಲಾ ಕೇಂದ್ರದ ಮಾಜಿ ಅಧ್ಯಕ್ಷೆ ಡಾ. ಲಲಿತಾ ರಾವ್ ಹೆಸರಿನಲ್ಲಿ ಸಂಗೀತ ಕ್ಷೇತ್ರದ ಸಾಧಕರಿಗೆ ನೀಡಲಾಗುವ 'ಲಲಿತ ಕಲಾ ಶ್ರೀ' ಪ್ರಶಸ್ತಿಯನ್ನು ಶ್ರೀಮತಿ ಜ್ಯೋತಿ ಯಾಜಿ ಭಟ್ ಅವರಿಗೂ, ಕನ್ನಡ ಕಲಾ ಕೇಂದ್ರದ ಸದಸ್ಯರಾಗಿದ್ದ ಬಹುಮುಖ ಪ್ರತಿಭೆ ಶ್ರೀ ಮತಿ ತಾರಾ ರಾವ್ ಸ್ಮರಣಾರ್ಥ ನೃತ್ಯ ರಂಗದ ಸಾಧಕರಿಗೆ ನೀಡಲಾಗುವ 'ತಾರಾಶ್ರೀ' ಪ್ರಶಸ್ತಿಯನ್ನು ಶ್ರೀಮತಿ ಅಮಿತ ಜತ್ತನ್ ಅವರಿಗೂ, ಕನ್ನಡ ಕಲಾ ಕೇಂದ್ರದ ಉಪಾಧ್ಯಕ್ಷ ಡಾಕ್ಟರ್ ಪಿಜಿ ರಾವ್ ತಮ್ಮ ಮಾತಾಪಿತರ ಹೆಸರಿನಲ್ಲಿ ಯಕ್ಷರಂಗದ ಸಾಧಕರಿಗೆ ಕೊಡುತ್ತಿರುವ 'ಸತ್ಯರಾಮ ಪ್ರಶಸ್ತಿ'ಯನ್ನು ಶ್ರೀ ನಿತಿನ್ ಜಾಧವ್ ಅವರಿಗೂ ನೀಡಲಾಯಿತು.

---

ಮೂರನೇ ಪುಟದಿಂದ.....

ಆಧುನಿಕತೆಯಿಂದಾಗಿ ರಾಸಾಯನಿಕ ಗೊಬ್ಬರಗಳು ಲಗ್ಗೆ ಹಾಕಲಾರಂಭಿಸಿದಾಗ, ಫಸಲೇನೋ ಜಾಸ್ತಿ ಬರಬಹುದು ಆದರೆ, ಫಸಲುಗಳೆಲ್ಲ ವಿಷದಿಂದ ಕೂಡಿರುತ್ತದೆ. ಗೊಬ್ಬರ ಹಾಕುವಾಗ, ಫಸಲುಗಳು ವಿಷಮುಕ್ತವಾಗಿರುತ್ತಿದ್ದವು. ಈಗ ಯಾವುದೇ ಬೆಳೆ ನೋಡಿ, ಅವು ರಾಸಾಯನಿಕ ಗೊಬ್ಬರಗಳಿಂದ ಬೆಳೆದಿರೋದರಿಂದ ಅವುಗಳು ಮನುಷ್ಯನ ಆರೋಗ್ಯಕ್ಕೆ ಹಾನಿಕಾರಕವಾಗಿದೆ. ಲಾಭದ ದೃಷ್ಟಿಯಿಂದ ವ್ಯಾಪಾರಸ್ಥರು ಹಣ್ಣುಗಳನ್ನು ರಾಸಾಯನಿಕಗಳಿಂದ ಹೆಚ್ಚು ದಿನ ಬಾಳುವಂತೆ ಶೇಖರಿಸಿಡುವಂತೆ ಮಾಡುವುದರಿಂದ, ಇವತ್ತಿನ ದಿನದಲ್ಲಿ ಯಾವುದು ತಿಂದರೂ ಮನುಷ್ಯ ರೋಗದಿಂದ ಮುಕ್ತನಾಗುವಂತಿಲ್ಲ. ಅದರಿಂದ ಇವತ್ತು ಹೆಚ್ಚಿನ ಜನರು ಪರಿಸರಕ್ಕೆ ಪ್ರಿಯವಾದ ರೀತಿಯಲ್ಲಿ ವಸ್ತುಗಳನ್ನು ಉಪಯೋಗಿಸುವುದರತ್ತ ತಮ್ಮ ಗಮನವನ್ನು ಕೇಂದ್ರೀಕರಿಸಲಾರಂಭಿಸಿದ್ದಾರೆ. ಮೊದಲು ಗಣಪತಿಯನ್ನು ಮಣ್ಣಿನಿಂದ ಮಾಡಿದ ಮೂರ್ತಿಗಳನ್ನು ತರುತ್ತಿದ್ದರು. ಆದರೆ ಮಾರುಕಟ್ಟೆಯಲ್ಲಿ ವಿವಿಧ ರೀತಿಯಲ್ಲಿ ತಯಾರಿಸಿದ ಬಣ್ಣ ಬಣ್ಣದ ಮೂರ್ತಿಗಳು ಲಭ್ಯವಿರುವುದರಿಂದ ಜನ ಅದಕ್ಕೆ ಮಾರುಹೋಗುತ್ತಿದ್ದರು. ಆದರೆ ಇಂದು ಸ್ವಲ್ಪ ಮಟ್ಟಿಗೆ ಪರಿಸರದ ಬಗ್ಗೆ ಕಾಳಜಿ ಹುಟ್ಟಿದ್ದರಿಂದ ಜನ ಮಣ್ಣಿನ ಮೂರ್ತಿಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಾ ಇದ್ದಾರೆ. ಇನ್ನಾದರೂ ಜನ ಎಚ್ಚೆತ್ತುಕೊಳ್ಳಬೇಕು. ಒಟ್ಟಿನಲ್ಲಿ ಕಾಲ ಒಂದಲ್ಲ ಒಂದು ಕಾರಣಕ್ಕೆ ನಮಗೆಲ್ಲರಿಗೂ ಬುದ್ಧಿ ಕಲಿಸುತ್ತಿದೆ. ಅದೇನೇ ಇರಲಿ, ಆಡಂಬರಕ್ಕೆ ಮರುಳಾಗದೆ, ಶ್ರದ್ಧೆ, ಭಕ್ತಿಯಿಂದ ಸಾಮಾನ್ಯ ರೀತಿಯಲ್ಲಿ ಹಬ್ಬಗಳನ್ನು ಆಚರಿಸಿದರೆ, ಬಹುಶಃ ದೇವರು ಬಹು ಬೇಗ ಒಲಿದಾನು. ಇಂದು ಎಲ್ಲರ ಮನೆಯಲ್ಲಿ ಗೌರಿ ಗಣೇಶ ಹಬ್ಬದ ಸಂಭ್ರಮ, ಸಡಗರ. ಶ್ರೀ ಗಣೇಶನು ಎಲ್ಲರಿಗೂ ಸನ್ಮಂಗಳವನ್ನುಂಟು ಮಾಡಲಿ, ಎಲ್ಲರ ಇಷ್ಟಾರ್ಥ ನೆರವೇರಲಿ ಎಂದು ಹಾರೈಸುತ್ತಾ, ಎಲ್ಲರಿಗೂ ಗೌರಿ ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು.

# Sushruta Samhita



- **M. A. N. Prasad**

One of the very early volumes, Sushruta Samhita is a compendium on medicine and surgery by Sushruta. There are lot of different views and opinions as to when it was written. Scholars date it between 1200 – 600 B.C. Written originally by Sushruta, some portion of the palm leaves were lost and around 100 B.C. the Samhita was put together by Nagarjuna (not Nagarjuna the chemist, who lived around 10th century A.D.).

The Sushruta Samhita is of great historical importance because it includes unique chapters describing surgery, surgical training, instruments, their construction, and surgical procedures, some of which are still followed today, by modern science of surgery.

Sushruta Samhita is an exhaustive work on medicine and surgery. It consists of six volumes, viz. Sutrasthanam, Nidhanasthanam, Sarirasthanam, Chikitsasthanam, Kalpasthanam and Uttara sthanam. The first five volumes are considered as the old part and the last volume, viz. Uttarasthana is believed to be written by Nagarjuna. The work consists of 186 chapters and contains descriptions of 1,120 illnesses, 700 medicinal plants, 64 preparations from mineral sources and 57 preparations based on animal sources.

Here is an attempt to give a brief overview of this massive work.

**Sutrasthanam** deals with the back ground to Ayurveda, preliminary surgical measures and practice of surgery, effect of different seasons on health, cauterization, leaches and their uses, piercing and bandaging, managing ulcer patients, classifying diseases requiring medical or surgical treatment, etc.

**Nidhanasthanam** deals with sixteen chapters that speak of the etiology of diseases. It covers the pathological causes and symptomology of diseases, etc.

**Sarirasthanam** consists of ten chapters which deal with anatomy and physiology of the human body, etc.

**Chikitsasthanam** has 40 chapters on therapeutics. With 1886 shlokas, it covers the diseases of nervous system, haemorrhoids, skin disorders in general, diseases of the urinary tract, dropsy, obstetrics and gynaecology, caesarean section, tumours & ulcers, *kshudra roga* (minor ailments), etc.


**Kalpasthanam** has 8 chapters and deals with characteristics of snake bite and insect bites and how their treatment.

**Uttarasthana** has 66 chapters and 2317 shlokas. It deals with 76 eye diseases, 28 ear diseases, 31 nasal diseases, 11 diseases related to head, 72 oral diseases and 67 diseases related to head, etc.

The Sushruta Samhita is best known for its approach and discussions of surgery. It was one of the first in human history to suggest that a student of surgery should learn about human body and its organs by dissecting a dead body. It recommends the student to practice on objects resembling the diseased or body part like pumpkin, bottle gourd, cucumber, leather bags filled with water and bladders of dead animals. In fact, Sushruta recommends 'Avagharshana' for dissecting dead bodies. In 'Avagharshana' the dead body is covered with kusa grass and placed at the edge of the water of a rivulet. After three days it is taken out carefully, and gradually the successive layers of the epidermis and dermis and of the muscles beneath are taken off by gently and lightly rubbing it over with a soft brush. There is a wide spread impression that Hippocrates is the father of medicine and he was the one who started the dissection of dead bodies. But, much before Hippocrates, Sushruta authored this

compendium and promoted the dissection of dead bodies to gain better knowledge of human anatomy and physiology.

The Samhita is so detailed that it covers various aspects of healthcare. Surgical operations are divided into eight categories such as incision, excision, scrapping, puncturing, probing, extracting, draining fluids and suturing. Talking of bandaging materials, it specifies various materials for bandaging such as cloth woven with fibres of Atasi plant, blankets made of wool, silk, cloth made from bark of Naga trees, inner bark or fibres of a tree, etc. Sushruta says that there are fourteen varieties of bandages.




SOME OF THE INSTRUMENTS ILLUSTRATED IN SUSHRUTA'S SAMHITA

In the chapters dealing with snake and insect bites, Sushruta classifies different snakes and their bites. Characteristic features of different species of snakes are mentioned. Various stages of poisoning and their treatment are discussed. He classifies Hooded snakes into twenty-six kinds, the non-hooded into twenty-two kinds and the hoodless and striped variety into ten kinds. Each category produces a set of characteristic symptoms and the physician can by observing the site of snake bite and the symptoms, diagnose the causative organism.

Sushruta was conducting plastic surgery to reconstruct nose, torn ear and cleft lip, etc. in fact the Sushruta Samhita is the first written record of rhinoplasty (reconstruction of nose). It mentions over 15 methods of reconstruction of nose, including sliding graft, rotation graft and pedicle graft, using a flap of skin from the cheek or forehead, similar to the method followed in modern surgical technique, even today.

Sushruta conducted surgeries for cataract, amputation of limbs, ruptures, hernia, haemorrhoids and fistula. He set fractures and dislocations. We might wonder how they could do all this when they had no knowledge of anaesthetics. They used medicated wine which enabled the patients to bear the pain of surgery.

Sushruta is very impressive in his writings on midwifery. He recommends Caesarean section in hopeless cases of obstruction.

A palm leaf manuscript of Sushruta Samhita is preserved in the Kaiser Library of Nepal. In early eighth century Sushruta Samhita was translated into Arabic. The Arabic translation reached Europe. The first complete English translation of the Sushruta Samhita was authored by Kaviraj Kunjalal Bhishagratna, who published it in three volumes in early twentieth century. Mysore University has published Kannada translations of the Samhita. These and many other versions are available today in the Internet.

When the first Volume of this translation appeared, the British Medical Journal in its issue of November 1912 said "it is certain that in this ancient medical book there are traces of knowledge which is comparatively recent in the West".

# India's achievement and challenges after its 75years of independence?

-Shantaram Sastry

India is like a big elephant. It moves slowly but it moves powerfully. After 72 years of independence we have achieved something and also lost something.

**Three major achievements**

1. The biggest achievement which I can think is **Green Revolution**. From a nation which was badly dependent even on low quality rice (*lal chawal)* imported from USA, to becoming self sufficient and food exporting nation is a big task for such a huge nation. People of my generation can't relate much. But those were very challenging times of the 1960s. We suffered two major wars i.e 1962 and 1965. During the 1965 war when the citizens were demoralized, the then prime minister Pt. L B Shashtri gave the slogan: "*jai jawaan, jai kisaan*".
2. **Nuclear tests**: despite all sanctions and international pressures, we became a nuclear capable nation. It was a very urgent and important need which really gave us a confidence boost at international levels.
3. **Opening up the economy** in the crisis of 1991. We are had to mortgage our gold to British for survival. Then we took a very important decision of opening the market which brought major investments and accelerated our economic growth. Although, this policy also has its own demerits. But was a sour pill required in that time.

Achievements like ISRO-Mangalyaan/ indigenous supercomputers/ IT revolution etc can be included.

**Three major failures**

1. First and foremost is the **loss in the Indo-China war of 1962**. We were ignorant, and we were careless. Maybe because we were too busy in internal issues and we never thought that this could ever happen.
2. The **Babri masjid and Godhra riots**. For a nation that was created with the sole purpose of secularism and unity, this case is a big dent on the fabric of our country. It was a failure of our administration and failure of a nation as a whole.
   It depends on us how we handle the Jnanavaapi issue
3. **No representation in UN security council**. I think we deserve it. Each time we use the veto power of our allies, we pay a price for it. I know it is not that easy to get it, but we really deserve it.

Issues like the Kashmir issue/ 26/11 attacks/ corruption etc can also be included.

But we have since 2014 have established our credentials as a responsible Global country

One of the faults of Democracy is our Fractured polity, which many times works against the interests of India. But we have chosen to be a democracy, therefore there is no option for eliminating it, except thro Ballot Box

There are numerous other achieves and failures we have witnessed. We are still unable to fully channalise the amazing young workforce of the country. And a lot is yet to be done in the education and health sector.

But overall, we are developing both in terms of economy and society. Each year, we are getting better in various international rankings.

We as citizens need to participate along with the government for local administrative issues. This, I think is one to ways to remove corruption at lower levels and help us choose better leaders instead of just choosing them on the basis of party/ caste/ background.

Corruption, which is a major issue, cannot be solved without all our participations as responsible citizens.

# ನೇಸರು ಜಾಗತಿಕ ಏಕಾಂಕ ನಾಟಕ ಸ್ಪರ್ಧೆ– 2022

ಮೈಸೂರು ಅಸೋಸಿಯೇಷನ್‌ಗೆ 96 ವರ್ಷ ತುಂಬಿರುವುದರಿಂದ, ಈ ಸಂಭ್ರಮದ ಪ್ರಯುಕ್ತವಾಗಿ ಮೈಸೂರು ಅಸೋಸಿಯೇಷನ್ **ಏಕಾಂಕ ನಾಟಕ ರಚನಾ** ಸ್ಪರ್ಧೆಯನ್ನು ಆಯೋಜಿಸಿದೆ. ಈ ಸ್ಪರ್ಧೆಯಲ್ಲಿ ಇಡೀ ವಿಶ್ವದಾದ್ಯಂತ ಇರುವ ಎಲ್ಲ ಆಸಕ್ತರು ಇದರಲ್ಲಿ ಭಾಗವಹಿಸಬಹುದಾಗಿದೆ. ಆಸಕ್ತ ನಾಟಕಕಾರರು ಯಾವುದೇ ವಿಷಯದ ಕುರಿತಂತೆ ನಾಟಕಗಳನ್ನು ರಚಿಸಬಹುದಾಗಿದೆ. ಇಲ್ಲಿ ಯಾವುದೇ ಪ್ರವೇಶ ಶುಲ್ಕವಿರುವುದಿಲ್ಲ.

**ಪ್ರಥಮ ಬಹುಮಾನ 15,000/-**
**ದ್ವಿತೀಯ ಬಹುಮಾನ 10,000/-**
**ತೃತೀಯ ಬಹುಮಾನ 7,500/-**

**ಸ್ಪರ್ಧೆಯ ನಿಯಮಾವಳಿಗಳು:**

೧) ನಾಟಕಗಳು ಏಕಾಂಕ ನಾಟಕವಾಗಿದ್ದು ಸ್ವರಚಿತವಾಗಿರಬೇಕು. ಅನುವಾದ, ಅನುಕರಣೆ ಆಗಿರಕೂಡದು. ಕನ್ನಡದಲ್ಲಿಯೇ ಇರಬೇಕು.

೨) ನಾಟಕಗಳು ಸುಮಾರು 30 ಪುಟಗಳ ಮಿತಿಯಲ್ಲಿರಲಿ. ಒಂದು ವೇಳೆ ಈ ನಾಟಕವನ್ನು ಪ್ರದರ್ಶನ ಮಾಡಿದರೆ 45-50 ನಿಮಿಷಗಳ ಒಳಗೆ ಮುಗಿಯುವಂತಿರಬೇಕು. ಕಾಗದದ ಒಂದೇ ಮಗ್ಗುಲಲ್ಲಿ ಚಿತ್ತಿಲ್ಲದಂತೆ ಬರೆದು ಕಳುಹಿಸಿ. (ಹಸ್ತ ಯಾ ಕಂಪ್ಯೂಟರ್ ಮುದ್ರಿತ). ಇಮೈಲ್ ಮೂಲಕವೂ ಕಳುಹಿಸಬಹುದು.

೩) ನಾಟಕಕಾರರ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಇಮೈಲ್ ಪ್ರತ್ಯೇಕ ಕಾಗದದಲ್ಲಿ ಬರೆದು ಕಳುಹಿಸಿ.

೪) ಒಬ್ಬರು ಒಂದೇ ನಾಟಕವನ್ನು ಬರೆದು ಕಳುಹಿಸಬೇಕು.

೫) ಸ್ಪರ್ಧೆಗೆ ಬಂದ ನಾಟಕಗಳನ್ನು ಮರಳಿಸಲಾಗುವುದಿಲ್ಲ.

೬) ತೀರ್ಪುಗಾರರ ತೀರ್ಮಾನವೇ ಅಂತಿಮ.

೭) ನಾಟಕಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ 15.11.2022

೮) ತೀರ್ಪುಗಾರರ ತೀರ್ಮಾನವನ್ನು ಜನವರಿ ತಿಂಗಳಿನಲ್ಲಿ ಜಾಹೀರುಗೊಳಿಸಲಾಗುವುದು.

**Postal Address:**

The Mysore Association, Mumbai
393, Bhau Daji Road, Matunga (E), Mumbai – 400019

---

## ಮೈಸೂರು ಅಸೋಸಿಯೇಷನ್ನಿನಲ್ಲಿ - ಮುಂಬರುವ ಕಾರ್ಯಕ್ರಮಗಳು

| ದಿನಾಂಕ ಮತ್ತು ಸಮಯ | ಕಾರ್ಯಕ್ರಮ |
|---|---|
| ಶನಿವಾರ 24.09.2022<br>ಸಂಜೆ 5.30 ಕ್ಕೆ | **ಚರ್ಚೆ:** NEPOTISM: ಒಳ್ಳೆಯದೇ ಕೆಟ್ಟದ್ದೇ? |
| ರವಿವಾರ 02.10.2022<br>ಸಂಜೆ 5.30 ಕ್ಕೆ | ಶಾರದಾ ಪೂಜೆ - ನವರಾತ್ರಿ ಹಬ್ಬ |

# ಅಸೋಸಿಯೇಶನ್‌ನಲ್ಲಿ ಗೌರಿ ಗಣೇಶ ಮಹೋತ್ಸವ

ಎರಡು ವರ್ಷಗಳಿಂದ ಕೋವಿಡ್ ಪ್ರಸಾರ ಹಾಗೂ ನಿರ್ಬಂಧನೆಗಳಿಂದಾಗಿ ಎಲ್ಲ ಹಬ್ಬ ಸಂಭ್ರಮಗಳಿಗೆ ಇದ್ದ ಕಡಿವಾಣ ಕಳಚಿದ ಕಾರಣ ಈ ವರ್ಷ ಸ್ವರ್ಣಗೌರಿ ಮತ್ತು ವರ ಸಿದ್ಧಿಗಣಪತಿ ಹಬ್ಬಗಳು ಬಹಳ ಉತ್ಸಾಹದಿಂದ ನಡೆಸಲಾಯಿತು.





30.08.2022 ರಂದು ಸ್ವರ್ಣ ಗೌರಿಯನ್ನು ಪ್ರತಿಷ್ಠಾಪಿಸಿ ಸುಮಂಗಲೆಯರು ಪದ್ಧತಿಯನು ಸಾರ ಸಾಂಗವಾಗಿ ಪೂಜೆ ಮಾಡಿ ಆರತಿ ಮಾಡಿದರು. ನೆರೆದ ಎಲ್ಲ ಹೆಣ್ಣು ಮಕ್ಕಳಿಗೂ ಮರದ ಬಾಗಿನ, ತಾಂಬೂಲ ಕೊಟ್ಟು ಸಂಭ್ರಮಿಸಿದರು.




31.08.2022ರಂದು ಮಹಾಗಣಪತಿಯನ್ನು ಆಹ್ವಾನಿಸಿ ಪ್ರತಿಷ್ಠಾಪನೆ ಮಾಡಿ ಪೂಜೆಯನ್ನು ನಡೆಸಿಕೊಟ್ಟವರು ರಾಘವೇಂದ್ರ ಹಾಗೂ ಲತಾ ಉಪಾಧ್ಯಾಯ ದಂಪತಿ.



01.09.2022 ಬಧವಾರ ನಳಿನಿ ರಾವ್‌ವರು 'ಗಣಪತಿಗೊಂದು ಗೀತಗುಚ್ಛ' ಎಂಬ ಒಳ್ಳೆಯ ಕಾರ್ಯಕ್ರಮ ನಡೆಸಿಕೊಟ್ಟರು.



02.09.2022 ಗುರುವಾರ ಅಸೋಸಿಯೇಶನ್‌ನಲ್ಲಿ ಸದಸ್ಯೆಯರಿಗೆ ಅರಿಶಿಣ ಕುಂಕುಮದ ಕಾರ್ಯಕ್ರಮವಿತ್ತು.



ದೇವರಿಗೆ ನೃತ್ಯ ಸೇವೆಯುನ್ನು ಮಾಡಿದವರು ಹೊಸ ಸದಸ್ಯೆ ಕ್ಷಮಾ ಮತ್ತು ಅವಳ ತಾಯಿ ಗಿರಿಜಾ.



03.09.2022 ಶನಿವಾರ ಬಿ.ಎಸ್.ಕೆ.ಬಿ.ಯ ಮಹಿಳಾ ವಿಭಾಗದ ವತಿಯಿಂದ ಭಜನಾ ಕಾರ್ಯಕ್ರಮ ಸುಂದರವಾಗಿ ಭಕ್ತಿ ಸಹಿತ ನಡೆದು ಸಂತೋಷವಾಯಿತು.



04.09.2022 ರವಿವಾರ ನವಗ್ರಹ ಪೂಜೆಯ ಜೊತೆಗೆ ಸಾಂ. ಗೋಪಾಂಗವಾಗಿ ಫಲ್ಗುಣ ಮತ್ತು ದೀಪ್ತಿ ದಂಪತಿ ಮಗ ಸುವ್ರತನ ಸಹಿತ ನಡೆಸಿಕೊಟ್ಟರು.





ನಂತರ ವಿಸರ್ಜನೆಯ ಪೂಜೆ ಮಾಡಿ ದೊಡ್ಡ ಟ್ರಕ್ಕ್‌ನಲ್ಲಿ ಮೆರವಣಿಗೆಯಲ್ಲಿ ಗೌರಿ ಗಣೇಶರನ್ನು ದಾದರ್ ಶಿವಾಜಿ ಪಾರ್ಕ್‌ಗೆ ಕರೆದುಕೊಂಡು ಹೋಗಿ ಸಮುದ್ರ ರಾಜನ ಮಡಿಲಿಗೆ ಕಳಿಸಿಕೊಟ್ಟು ಬಂದೆವು

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077